ಸಂಪುಟ 01 । ಸಂಚಿಕೆ 226 ಬುಧವಾರ 21 ಅಕ್ಟೋಬರ್ 2026 । ಪುಟ 4 । ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ಪೊಲೀಸ್ ಸ್ಮರಣ ದಿನ (Police Commemoration Day)
ಕರ್ತವ್ಯ ನಿರ್ವಹಿಸುವಾಗ ಪ್ರಾಣತ್ಯಾಗ ಮಾಡಿದ ಪೊಲೀಸ್ ಸಿಬ್ಬಂದಿಯ ತ್ಯಾಗವನ್ನು ಸ್ಮರಿಸುವ ದಿನ.

2)ಜಾಗತಿಕ ಘನತೆಯ ದಿನ (Global Dignity Day)
ಪ್ರತಿಯೊಬ್ಬ ವ್ಯಕ್ತಿಯ ಘನತೆ, ಗೌರವ ಮತ್ತು ಮಾನವೀಯ ಮೌಲ್ಯಗಳನ್ನು ಉತ್ತೇಜಿಸುವ ದಿನ.

3)ವಿಶ್ವ ಅಯೋಡಿನ್ ಕೊರತೆ ತಡೆಗಟ್ಟುವ ದಿನ (Global Iodine Deficiency Disorders Prevention Day)
ಅಯೋಡಿನ್‌ನ ಮಹತ್ವದ ಕುರಿತು ಜಾಗೃತಿ ಮೂಡಿಸುವ ದಿನ.

4) ಸರೀಸೃಪಗಳ ಜಾಗೃತಿ ದಿನ (Reptile Awareness Day)
ಹಾವು, ಹಲ್ಲಿ ಮತ್ತು ಇತರ ಸರೀಸೃಪಗಳ ಬಗ್ಗೆ ಅರಿವು ಮೂಡಿಸುವ ದಿನ.

ಸುಭಾಷಿತ

ಅನ್ಯಾಯ 'ಮಾಡುವುದು' ಅನ್ಯಾಯವನ್ನು ಸಹಿಸುವುದಕ್ಕಿಂತಲೂ ಹೀನಕರವಾದುದು.

ಪ್ಲೇಟೊ

ನೈಜ್ಯ ದೇಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಮಹಾನವಮಿ ಉತ್ಸವ

ಭಕ್ತಿ, ಶಕ್ತಿ, ಧರ್ಮ ಮತ್ತು ಮಾನವೀಯತೆಯ ಸಂದೇಶ ಸಾರಿದ ಶರನ್ನವರಾತ್ರಿ ಕಾರ್ಯಕ್ರಮ

ಮಹಾನವಮಿ ನಮ್ಮೊಳಗಿನ ದುಷ್ಟ ಆಲೋಚನೆಗಳನ್ನು ದೂರಮಾಡಿ ಸನ್ಮಾರ್ಗದಲ್ಲಿ ನಡೆಯಲು ಪ್ರೇರಣೆ ನೀಡುತ್ತದೆ ಇರ್ಫಾನ್ ಕೆ.

ನೈಜ್ಯ ದೇಸೆ ನ್ಯೂಸ್

ಸಿಂಧನೂರು: ನಗರದ ರಾಮಕೃಷ್ಣ ವಿವೇಕಾನಂದ ಆಶ್ರಮದ ವತಿಯಿಂದ ಶರನ್ನವರಾತ್ರಿ ಉತ್ಸವದ ಅಂಗವಾಗಿ ಮಹಾನವಮಿ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಭಗವನ್ನಾಮ ಸಂಕೀರ್ತನೆ, ಭಕ್ತಿಗೀತೆಗಳು ಹಾಗೂ ಆಧ್ಯಾತ್ಮಿಕ ಸಂದೇಶಗಳ ಮೂಲಕ ಕಾರ್ಯಕ್ರಮವು ಧಾರ್ಮಿಕ ವಾತಾವರಣವನ್ನು ನಿರ್ಮಿಸಿತು.

ಕಾರ್ಯಕ್ರಮದ ಅಂಗವಾಗಿ ಸಿಂಧನೂರು ಹೆಲ್ತ್ ಕ್ಲಬ್ ಭಜನಾ ತಂಡದವರಿಂದ ಭಗವನ್ನಾಮ ಸಂಕೀರ್ತನೆ ನಡೆಯಿತು. ಭಜನಾ ತಂಡದ ಸದಸ್ಯರು ಭಕ್ತಿಗೀತೆಗಳ ಮೂಲಕ ದೇವಿಯ ಮಹಿಮೆಯನ್ನು ಸ್ಮರಿಸಿ ಭಕ್ತರಲ್ಲಿ ಆಧ್ಯಾತ್ಮಿಕ ಭಾವನೆಯನ್ನು ಮೂಡಿಸಿದರು. ಬಳಿಕ ಹುಬ್ಬಳ್ಳಿಯ ಬಾಲ ಕಲಾವಿದೆ ಕು. ಶರ್ವರಿ.ವಿ. ಅವರು *"ಸರ್ವವಂದಿತೆ ಕಾರದಾಮಾತೆ"* ಎಂಬ ವಿಶೇಷ ಕಾರ್ಯಕ್ರಮವನ್ನು ನಡೆಸಿಕೊಟ್ಟರು. "ಯುವತಿಯರೇ, ಆದರ್ಶ ಬದುಕಿಗೆ ಶ್ರೀಮಾತೆ ಹೇಳುವುದನ್ನೊಮ್ಮೆ ಕೇಳಿ" ಎಂಬ ಆಶಯದೊಂದಿಗೆ ಯುವತಿಯರು ಜೀವನದಲ್ಲಿ ಉತ್ತಮ ಸಂಸ್ಕಾರ, ಶಿಸ್ತು, ಆತ್ಮವಿಶ್ವಾಸ ಹಾಗೂ ಆದರ್ಶಗಳನ್ನು ಬೆಳೆಸಿಕೊಳ್ಳುವ ಸಂದೇಶವನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಸಿಂಧನೂರಿನ ಹಿರಿಯ ವಕೀಲರಾದ ಶ್ರೀ ವೀರೇಶ ಪನ್ನೂರು ಹಾಗೂ ಸನ್‌ರೈಸ್ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ. ಅವರು ಉಪಸ್ಥಿತರಿದ್ದರು.

ಧರ್ಮದ ಹಾದಿಯಲ್ಲಿ ನಡೆದಾಗ ಮಾತ್ರ ನಿಜವಾದ ವಿಜಯ ಸಾಧ್ಯ ಈ ಸಂದರ್ಭದಲ್ಲಿ ಮಾತನಾಡಿದ ಸನ್‌ರೈಸ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಶ್ರೀ ಇರ್ಫಾನ್ ಕೆ. ಅವರು, "ನವರಾತ್ರಿಯ ಒಂಬತ್ತನೇ ದಿನವಾದ ಮಹಾನವಮಿಯು ಶಕ್ತಿ, ಭಕ್ತಿ, ಧೈರ್ಯ ಮತ್ತು ವಿಜಯದ ಸಂಕೇತವಾಗಿದೆ. ದೇವಿಯ ಆರಾಧನೆಯ ಮೂಲಕ ಮನುಷ್ಯನು ತನ್ನ ಜೀವನದಲ್ಲಿ ಧೈರ್ಯ, ಆತ್ಮವಿಶ್ವಾಸ ಮತ್ತು ಸತ್ಕಾರ್ಯಗಳ ಸಂಕಲ್ಪವನ್ನು ಬೆಳೆಸಿಕೊಳ್ಳಬೇಕು. ಒಳ್ಳೆಯತನವು ಕೆಟ್ಟತನದ ಮೇಲೆ ಜಯ ಸಾಧಿಸುತ್ತದೆ ಎಂಬುದು ಮಹಾನವಮಿ ಸಾರುವ ಅತ್ಯಂತ ಮಹತ್ವದ ಸಂದೇಶವಾಗಿದೆ" ಎಂದು ಹೇಳಿದರು. "ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳು ಕೇವಲ ಆಚರಣೆಗಳಿಗೆ





ಸೀಮಿತವಾಗಿಲ್ಲ. ಅವು ಮನುಷ್ಯನ ಜೀವನಕ್ಕೆ ಉತ್ತಮ ದಾರಿಯನ್ನು ತೋರಿಸುವ ಮೌಲ್ಯಗಳ ಪ್ರತೀಕಗಳಾಗಿವೆ. ಮಹಾನವಮಿಯು ನಮ್ಮೊಳಗಿನ ಅಹಂಕಾರ, ಅಜ್ಞಾನ, ಕೋಪ, ದ್ವೇಷ ಮತ್ತು ಕೆಟ್ಟ ಆಲೋಚನೆಗಳನ್ನು ದೂರಮಾಡಿ ಸತ್ಯ, ಧರ್ಮ, ಜ್ಞಾನ ಹಾಗೂ ಮಾನವೀಯತೆಯ ಮಾರ್ಗದಲ್ಲಿ ನಡೆಯಲು ಪ್ರೇರಣೆ ನೀಡುತ್ತದೆ. ದೇವಿಯ ಆರಾಧನೆಯೊಂದಿಗೆ ನಮ್ಮ ನಡೆ-ನುಡಿಗಳಲ್ಲಿಯೂ ಒಳ್ಳೆಯತನವನ್ನು ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ" ಎಂದು ತಿಳಿಸಿದರು.

ಮಹಿಳಾ ಶಕ್ತಿಯ ಗೌರವವೇ ಸಮಾಜದ ಪ್ರಗತಿಯ ಅಡಿಪಾಯ ಮಹಾನವಮಿಯ ಸಂದರ್ಭದಲ್ಲಿ ಶಕ್ತಿ ಸ್ವರೂಪಿಣಿಯಾದ ದೇವಿಯ ಆರಾಧನೆಯ ಮಹತ್ವವನ್ನು ವಿವರಿಸಿದ ಅವರು, ಮಹಿಳೆಯರ ಗೌರವ, ಶಿಕ್ಷಣ, ಸ್ವಾವಲಂಬನೆ ಮತ್ತು ಆತ್ಮವಿಶ್ವಾಸಕ್ಕೆ ಸಮಾಜದಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು ಎಂಬ ಸಂದೇಶವನ್ನು ಒತ್ತಿಹೇಳಿದರು. "ಮಹಿಳೆಯರು ಕುಟುಂಬದ ಸಂಸ್ಕಾರವನ್ನು ಉಳಿಸುವುದರ ಜೊತೆಗೆ ಸಮಾಜದ ಅಭಿವೃದ್ಧಿಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಾರೆ. ಯುವತಿಯರು ಉತ್ತಮ ಶಿಕ್ಷಣ ಪಡೆದು, ಆತ್ಮವಿಶ್ವಾಸದಿಂದ ಜೀವನದ ಸವಾಲುಗಳನ್ನು ಎದುರಿಸಿ, ಸಮಾಜಕ್ಕೆ ಮಾದರಿಯಾಗಬೇಕು. ಆದ-ರ್ಶ ಬದುಕಿಗೆ ಧಾರ್ಮಿಕ ಮೌಲ್ಯಗಳ ಜೊತೆಗೆ ಜ್ಞಾನ, ಶಿಸ್ತು ಮತ್ತು ಮಾನವೀಯತೆಯೂ ಅಗತ್ಯ" ಎಂದು ಹೇಳಿದರು. ಭಕ್ತಿ ಮತ್ತು ಮಾನವೀಯತೆ ಬದುಕಿನ ಎರಡು ಪ್ರಮುಖ ಮೌಲ್ಯಗಳು "ಶಕ್ತಿ ಇಲ್ಲದೆ ಸಾಧನೆಯಿಲ್ಲ, ಭಕ್ತಿ ಇಲ್ಲದೆ ಶಾಂತಿಯಿಲ್ಲ, ಧರ್ಮವಿಲ್ಲದೆ ವಿಜಯವಿಲ್ಲ. ದೇವರ ಮೇಲಿನ ಭಕ್ತಿ ನಮ್ಮಲ್ಲಿ ಒಳ್ಳೆಯ ಆಲೋಚನೆಗಳನ್ನು ಬೆಳೆಸಬೇಕು; ಧಾರ್ಮಿಕ ಆಚರಣೆಗಳು ಸಮಾಜದಲ್ಲಿ ಪ್ರೀತಿ, ಸಹೋದರತ್ವ, ಪರಸ್ಪರ ಗೌರವ ಮತ್ತು ಸೇವಾ ಮನೋಭಾವವನ್ನು ಹೆಚ್ಚಿಸಬೇಕು. ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ಇತರರಿಗೆ ನೆರವಾಗುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಸಮಾಜದಲ್ಲಿ ನಿಜವಾದ ಸಾಮರಸ್ಯ ಸಾಧ್ಯ" ಎಂದು ಅಭಿಪ್ರಾಯಪಟ್ಟರು.

ನಂತರ ಮಾತನಾಡಿದ ಲಕ್ಷ್ಮಯ್ಯ ಶೆಟ್ಟಿ, ಸಿಂಧನೂರು ಹೆಲ್ತ್ ಕ್ಲಬ್ ಅಧ್ಯಕ್ಷರು ಮಾತನಾಡಿ, ನಮ್ಮ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ಆರೋಗ್ಯದ ಮಹತ್ವ ಅಡಗಿದೆ. ಹಿಂದಿನ ಕಾಲದಲ್ಲಿ ನಮ್ಮ ಹಿರಿಯರು ಅನುಸರಿಸುತ್ತಿದ್ದ ಆಹಾರ ಪದ್ಧತಿ, ದಿನಚರಿ, ಯೋಗ, ವ್ಯಾಯಾಮ ಹಾಗೂ ನೈಸರ್ಗಿಕ ಜೀವನಶೈಲಿ ಆರೋಗ್ಯಕರ ಬದುಕಿಗೆ ಪೂರಕವಾಗಿದ್ದವು. ಆದರೆ ಇಂದಿನ ಆಧ-ುನಿಕ ಜೀವನಶೈಲಿಯಲ್ಲಿ ಬದಲಾವಣೆಗಳಾಗುತ್ತಿದ್ದು, ದೈಹಿಕ ಚಟುವಟಿಕೆಗಳ ಕೊರತೆ ಮತ್ತು ಆಹಾರ ಪದ್ಧತಿಯಲ್ಲಿನ ವ್ಯತ್ಯಾಸಗಳಿಂದ ಅನೇಕ ಆರೋಗ್ಯ ಸಮಸ್ಯೆಗಳು ಎದುರಾಗುತ್ತಿವೆ ಎಂದು ಹೇಳಿದರು.

ನಮ್ಮ ಸಂಸ್ಕೃತಿಯು ದೇಹದ ಆರೋಗ್ಯದ ಜೊತೆಗೆ ಮಾನಸಿಕ ನೆಮ್ಮದಿ, ಶಿಸ್ತು ಮತ್ತು ಉತ್ತಮ ಜೀವನಮೌಲ್ಯಗಳಿಗೂ ಆದ್ಯತೆ ನೀಡುತ್ತದೆ. ಪ್ರತಿಯೊಬ್ಬರೂ ಪ್ರತಿದಿನ ವ್ಯಾಯಾಮ, ನಡಿಗೆ, ಯೋಗ ಹಾಗೂ ಸಮತೋಲಿತ ಆಹಾರಕ್ಕೆ ಆದ್ಯತೆ ನೀಡಬೇಕು. ಆರೋಗ್ಯವೇ ನಿಜವಾದ ಸಂಪತ್ತು ಎಂಬುದನ್ನು ಅರಿತು, ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು. ಆರೋಗ್ಯವಂತ ವ್ಯಕ್ತಿಗಳಿಂದಲೇ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ. ಆದ್ದರಿಂದ ನಮ್ಮ ಸಂಸ್ಕೃತಿಯಲ್ಲಿರುವ ಉತ್ತಮ ಆರೋಗ್ಯಕರ ಪದ್ಧತಿಗಳನ್ನು ಉಳಿಸಿ, ಮುಂದಿನ ಪೀಳಿಗೆಗೆ ಪರಿಚಯಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ದೇವಿಯ ಮಹಿಮೆಯನ್ನು ಸಾರುವ, *"ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ಎಂಬ ಶ್ಲೋಕವನ್ನು ಉಲ್ಲೇಖಿಸಿ, ಸಮಸ್ತ ಜೀವಿಗಳಲ್ಲಿ ಶಕ್ತಿಯ ರೂಪದಲ್ಲಿ ನೆಲೆಸಿರುವ ದೇವಿಗೆ ಭಕ್ತಿಪೂರ್ವಕ ನಮನ ಸಲ್ಲಿಸಿದರು. ಇದೇ ವೇಳೆ ಎಲ್ಲರ ಜೀವನದಲ್ಲಿ ಸುಖ, ಶಾಂತಿ, ಸಮೃದ್ಧಿ ಹಾಗೂ ಉತ್ತಮ ಆರೋಗ್ಯ ನೆಲೆಸಲಿ ಎಂದು ಹಾರೈಸಿ, ಸರ್ವರಿಗೂ ಮಹಾನವಮಿಯ ಹಾರ್ದಿಕ ಶುಭಾಶಯಗಳನ್ನು ತಿಳಿಸಿದರು. ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ನಡೆದ ಶರನ್ನವರಾತ್ರಿ ಉತ್ಸವವು ಧಾರ್ಮಿಕ ಭಕ್ತಿ, ಆಧ-್ಯಾತ್ಮಿಕ ಚಿಂತನೆ, ಮಹಿಳಾ ಶಕ್ತಿಯ ಮಹತ್ವ ಹಾಗೂ ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಸಾರುವಕಾರ್ಯಕ್ರಮವಾಗಿ ಗಮನ ಸೆಳೆಯಿತು. ಇಂತಹ ಉತ್ಸವಗಳು ಯುವಜನರಲ್ಲಿ ಸಂಸ್ಕಾರ, ನೈತಿಕ ಮೌಲ್ಯಗಳು ಮತ್ತು ಸಮಾಜದ ಬಗ್ಗೆ ಜವಾಬ್ದಾರಿಯ ಭಾವನೆಯನ್ನು ಬೆಳೆಸಲು ಸಹಕಾರಿಯಾಗುತ್ತವೆ.





ಜಾಲಹಳ್ಳಿಯಲ್ಲಿ ನಸೀಮಾ ಕೂಲ್ ಡ್ರಿಂಕ್ಸ್ ಅಂಗಡಿಯ ಆಸನ ವ್ಯವಸ್ಥೆ ಧ್ವಂಸ: ಪೊಲೀಸರಿಗೆ ದೂರು

ಅಂಗಡಿಯ ಮುಂಭಾಗದ ಗ್ರಾಹಕರ ಆಸನ ವ್ಯವಸ್ಥೆಗೆ ಹಾನಿ; ಕಿಡಿಗೇಡಿಗಳನ್ನು ಪತ್ತೆಹಚ್ಚಿ ಕ್ರಮ ಕೈಗೊಳ್ಳಲು ಆಗ್ರಹ

ನೈಜ್ಯ ದೇಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯಲ್ಲಿ ಕೂಲ್ ಡ್ರಿಂಕ್ಸ್ ಅಂಗಡಿಯ ಮುಂಭಾಗದ ಗ್ರಾಹಕರು ಕುಳಿತುಕೊಳ್ಳಲು ಮಾಡಲಾಗಿದ್ದ ಆಸನ ವ್ಯವಸ್ಥೆಯನ್ನು ಅಜ್ಞಾತ ವ್ಯಕ್ತಿಗಳು ಧ್ವಂಸಗೊಳಿಸಿ ಹಾನಿ ಮಾಡಿರುವ ಘಟನೆ ನಡೆದಿದೆ.

ಜಾಲಹಳ್ಳಿಯ *ನಸೀಮಾ ಕೂಲ್ ಡ್ರಿಂಕ್ ಆ?ಯಂಡ್ ಎಗ್ ಸೆಂಟ-ರ್ ಅಂಗಡಿಯ ಮಾಲೀಕ ಖಮರುಲ್ ಇಸ್ಲಾಂ (ತಂದೆ: ರಾಜ ಮಹಮ್ಮದ್) ಅವರು ಈ ಕುರಿತು ಜಾಲಹಳ್ಳಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. 'ದೂರುದಾರರು ಅ.19ರಂದು ರಾತ್ರಿ ಸುಮಾರು 8:30 ಗಂಟೆಗೆ ಅಂಗಡಿಯನ್ನು ಮುಚ್ಚಿ ಮನೆಗೆ ತೆರಳಿದ್ದರು. ಈ ಸಂದರ್ಭದಲ್ಲಿ ಅಜ್ಞಾತ ವ್ಯಕ್ತಿಗಳು



ಅಂಗಡಿಯ ಮುಂಭಾಗದಲ್ಲಿದ್ದ ಗ್ರಾಹಕರು ಕುಳಿತುಕೊಳ್ಳಲು ಹಾಕಲಾಗಿದ್ದ ಆಸನ ವ್ಯವಸ್ಥೆಯನ್ನು ಧ್ವಂಸಗೊಳಿಸಿ ಹಾನಿ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಅಂಗಡಿಯ ಮುಂಭಾಗದ ಆಸನ ವ್ಯವಸ್ಥೆಯನ್ನು ಧ್ವಂಸಗೊಳಿಸಿದ ಕಿಡಿಗೇಡಿಗಳನ್ನು ಕೂಡಲೇ ಪತ್ತೆಹಚ್ಚಿ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಅವರಿಗೆ ಮನವಿ ಸಲ್ಲಿಸಲಾಗಿದೆ.

ಘಟನೆಯ ಕುರಿತು ಪೊಲೀಸರು ಪರಿಶೀಲನೆ ನಡೆಸಿ, ಹಾನಿಗೆ ಕಾರಣರಾದವರನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅಂಗಡಿ ಮಾಲೀಕರು ಒತ್ತಾಯಿಸಿದ್ದಾರೆ.

ದೇವದುರ್ಗದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆಗೆ ಚಾಲನೆ

ತಹಶೀಲ್ದಾರ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳಿಂದ ಯಾತ್ರೆಗೆ ಚಾಲನೆ

ನೈಜ್ಯ ದೇಸೆ ನ್ಯೂಸ್

ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಇಂದು ಡಾ. ಬಿ.ಆರ್. ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆಗೆ ಚಾಲನೆ ನೀಡಲಾಯಿತು. ತಹಶೀಲ್ದಾರ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಪುರಸಭೆಯ ಮುಖ್ಯಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಯಾತ್ರೆಗೆ ಚಾಲನೆ ನೀಡಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಭಾರತದ ಸಂವಿಧಾನ ಶಿಲ್ಪಿ, ಮಹಾನ್ ಸಮಾಜ ಸುಧಾರಕ ಹಾಗೂ ಸಮಾನತೆಯ ಹರಿಕಾರರಾದ ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಜನಸಾಮಾನ್ಯ-ರಿಗೆ ತಲುಪಿಸುವುದು ಈ ಯಾತ್ರೆಯ ಪ್ರಮುಖ ಉದ್ದೇಶವಾಗಿದೆ. ಸಮಾಜದಲ್ಲಿ ಸಮಾನತೆ, ಸಹೋದರತ್ವ, ಸಾಮಾಜಿ-ಕ ನ್ಯಾಯ ಹಾಗೂ ಶೈಕ್ಷಣಿಕ ಜಾಗೃತಿಯ ಮಹತ್ವವನ್ನು ಸಾರುವ ನಿಟ್ಟಿನಲ್ಲಿ ಇಂತಹ



ಯಾತ್ರೆಗಳು ಮಹತ್ವದ ಪಾತ್ರ ವಹಿಸುತ್ತವೆ.

ಡಾ. ಬಿ.ಆರ್. ಅಂಬೇಡ್ಕರ್ ಅವರು ಸಾರಿದ *"ಶಿಕ್ಷಣ, ಸಂಘಟನೆ ಮತ್ತು ಹೋರಾಟ"* ಎಂಬ ಸಂದೇಶವನ್ನು ಜನ-ರಿಗೆ ತಲುಪಿಸುವ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಹಾಗೂ ಅವರ ವಿಚಾರಧಾರೆಗಳನ್ನು ಜನಸಾಮಾನ್ಯರಲ್ಲಿ ಬಿತ್ತ-ರಿಸುವುದು ಈ ಯಾತ್ರೆಯ ಆಶಯವಾಗಿದೆ.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ರಾಜ-ಕುಮಾರ್ ಡಿ., ತಹಶೀಲ್ದಾರ್ ನಾಗಮ್ಮ ಕಟ್ಟಿಮನಿ, ಪುರಸಭೆಯ ಮುಖ್ಯಾಧಿಕಾರಿ ಹಂಪಯ್ಯ, ಹನುಮಂತಪ್ಪ ಮನ್ನಾಪುರಿ, ವಿಶ್ವನಾಥ್ ಬಲ್ಲಿದೇವ್, ರಂಗನಾಥ್ ಕೊಂಬಿನ್, ಮಲ್ಲಿಕಾರ್ಜುನ ಬೊಮ್ಮನಾಳ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಉತ್ತಮ ಜೀವನಶೈಲಿ ಆರೋಗ್ಯವನ್ನು ಕಾಪಾಡಬಲ್ಲ ಆಯುಧವಾಗಿದೆ : ಖಾಸಿಂ ಖುರೇಷಿ

ನೈಜ್ಯ ದೇಸೆ ನ್ಯೂಸ್

ಸಿಂಧನೂರು: ಎಕ್ಸಲೆಂಟ್ ಪದವಿ ಪೂರ್ವ ಕಾಲೇಜಿನ ಎನ್‌ಎಸ್‌ಎಸ್ ವಾರ್ಷಿಕ ಶಿಬಿರದಲ್ಲಿ ವಿಶೇಷ ಶಿಬಿರದಲ್ಲಿ ಆರೋಗ್ಯವೇ ಭಾಗ್ಯ ಎನ್ನುವ ವಿಷಯದ ಕುರಿತು ಉಪನ್ಯಾಸ ನೀಡಿದ ಖಾಸಿಂ ಖುರೇಷಿ ದಿದ್ದಿಗಿ ರವರು ಮಾತನಾಡುತ್ತಾ ಇಂದಿನ ಸಮಾಜವು ಆರೋಗ್ಯ ಪೀಡಿತ ಸಮಾಜ ವಾಗಿದ್ದು ಇಂದು ತಿನ್ನುವ ಆಹಾರ ಕಲುಷಿತ ಗೊಂಡಿರುವುದರಿಂದ ಹೊರಗಡೆ ಸಿಗುವ ಆಹಾರವನ್ನು ಸೇವಿಸುವ ಮಿತಿಯನ್ನು ಕಡಿಮೆಗೊಳಿಸಬೇಕು ಹಾಗೂ

ಯುವ ಜನತೆ ದುಶ್ಚಟ ಗಳಿಂದ ದೂರವಿರಬೇಕು ಹಾಗೂ ಸರಿಯಾದ ಸಮಯಕ್ಕೆ ಆಹಾರ ಸೇವನೆ ಮಾಡಬೇಕು ಉತ್ತಮ ಜೀವನಶೈಲಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಹಾಗೂ ಧೂಮಪಾನ ಮದ್ಯಪಾನ ದೂರವಿರಬೇಕು ಅಂದಾಗ



ಮಾತ್ರ ಉತ್ತಮ ಆರೋಗ್ಯಕರ ಸಮಾಜ ಸೃಷ್ಟಿಸಲು ಸಾಧ್ಯವಾಗುತ್ತದೆ ಎಂದರು

ಈ ಕಾರ್ಯಕ್ರಮದಲ್ಲಿ ಇನ್ನೋರ್ವ ಉಪನ್ಯಾಸಕರಾದ ಹನುಮಂತಪ್ಪ ಸುಕಲ್ಪೇಟೆ ರವರು ಮಾತನಾಡುತ್ತಾ ಇಂದು ಅನೇಕ ರೋಗಗಳಿಗೆ ಚಿಕಿತ್ಸೆಗಳಿದ್ದು ಸರಿಯಾದ ಸಮಯದಲ್ಲಿ ಚಿಕಿತ್ಸೆಗಳನ್ನ ತೆಗೆದುಕೊಳ್ಳುವ ಮೂಲಕ ಹಾಗೂ ಉತ್ತಮ ಆರೋಗ್ಯಕರ ಆಹಾರವನ್ನು ಸೇವಿಸುವುದರ ಜೊತೆಯಲ್ಲಿಯೇ ಉತ್ತಮ ಜೀವನಶೈಲಿ ಬೆಳೆಸಿಕೊಂಡರೆ ಉತ್ತಮ

ಯುವ ಸಮೂಹಕ್ಕೆ ಎನ್.ಎಸ್.ಎಸ್. ಶಿಬಿರಗಳ ಕೊಡುಗೆ:

ರಾಷ್ಟ್ರೀಯ ಸೇವಾ ಯೋಜನೆ (NSS) ಶಿಬಿರಗಳು ಕೇವಲ ವ್ಯಕ್ತಿತ್ವ ವಿಕಸನಕ್ಕೆ ಮಾತ್ರವಲ್ಲದೆ, ಸಮಾಜಮುಖಿ ಚಿಂತನೆಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇಂದಿನ ಧಾವಂತದ ಜೀವನಶೈಲಿಯಲ್ಲಿ ಯುವ ಜನತೆ ತಮ್ಮ ಸ್ವಂತ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇಂತಹ ವಿಶೇಷ ಶಿಬಿರಗಳ ಮೂಲಕ ಆರೋಗ್ಯ ಜಾಗೃತಿ ಮೂಡಿಸುವುದರಿಂದ ಯುವ ವಿದ್ಯಾರ್ಥಿಗಳು ಆರೋಗ್ಯವಂತ ಸಮಾಜದ ನಿರ್ಮಾತೃಗಳಾಗಲು ಸಾಧ್ಯವಾಗುತ್ತದೆ. ಆರೋಗ್ಯವೇ ನಿಜವಾದ ಸಂಪತ್ತು ಎಂಬ ಸಂದೇಶವನ್ನು ಯುವಕರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ತಮ್ಮ ಸುತ್ತಮುತ್ತಲಿನವರಿಗೂ ಆರೋಗ್ಯದ ಮಹತ್ವವನ್ನು ಸಾರಬೇಕು ಎಂಬುದು ಈ ಶಿಬಿರದ ಮುಖ್ಯ ಉದ್ದೇಶವಾಗಿದೆ

ಎಂದರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಕ್ಸಲೆಂಟ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಜಮೀಲ್ ಅಹಮದ್ ಹಾಗೂ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ವೆಂಕಟರಾವ್ ಎಂ ಹಾಗೂ ಎನ್ ಎಸ್ ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಶ್ರೀ ಮಹಬೂಬ್ ಕೊಳಬಾಳ್ ಶ್ರೀ ಹನುಮೇಶ್ ಪೂಜಾರಿ ಎನ್-ಎಸ್‌ಎಸ್ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.



ಸಾಹಿತ್ಯ ಸಿಂಚನ

ನೆರಳಿನೊಂದಿಗೆ ಸಂಭಾಷಣೆ

ನನ್ನ ಹೆಜ್ಜೆಯ ಜೊತೆಯಲಿ ನೆರಳೊಂದು ನಡೆಯಿತು,
ಮೌನದ ಭಾಷೆಯಲಿ ನನ್ನೊಡನೆ ಮಾತನಾಡಿತು.
ನನ್ನ ನಗುವಿನ ಹಿಂದೆ ನೋವನು ಕಂಡಿತು,
ನನ್ನ ಕಣ್ಣೀರಿನ ಕಥೆಯನು ಮೌನದಿ ಕೇಳಿತು.

"ಏಕೆ ಇಷ್ಟು ಮೌನ ನಿನ್ನ ಮನದೊಳಗೆ?"
ಎಂದು ನೆರಳು ಕೇಳಿತು ಪ್ರೀತಿಯ ಧ್ವನಿಯೊಳಗೆ.
"ಕನಸುಗಳಿವೆ ಸಾವಿರ, ದಾರಿಗಳು ಕಾಣವು,
ಮನದ ಭಾವನೆಗಳಿಗೆ ಪದಗಳು ಸಿಗವು."

ನೆರಳು ನಕ್ಕು ಹೇಳಿತು, "ಭಯಪಡಬೇಡ ನೀನು,
ಕತ್ತಲೆಯ ನಂತರ ಬರುವ ಬೆಳಕಾಗು ನೀನು.
ಸೋಲಿನ ದಾರಿಯಲ್ಲೂ ಪಾಠವೊಂದು ಅಡಗಿದೆ,
ಕಣ್ಣೀರ ಹನಿಯಲ್ಲೂ ಹೊಸ ಕನಸೊಂದು
ಮೂಡಿದೆ."

"ಜಗದ ಮಾತುಗಳಿಗೆ ಏಕೆ ಮನವನು
ನೋಯಿಸುವೆ?
ನಿನ್ನೊಳಗಿನ ಶಕ್ತಿಯನು ಏಕೆ ಮರೆಯುವೆ?
ನಿನ್ನ ಹೆಜ್ಜೆ ಗುರುತುಗಳೇ ನಿನ್ನ ಕಥೆ ಹೇಳಲಿ,
ನಿನ್ನ ನಂಬಿಕೆಯ ಬೆಳಕು ನಿನ್ನ ದಾರಿ ತೋರಲಿ."

ನೆರಳಿನ ಮಾತುಗಳು ಹೃದಯವನು ಮುಟ್ಟಿದವು,
ಮರೆತಿದ್ದ ಕನಸುಗಳು ಮತ್ತೆ ಜೀವ ಪಡೆದವು.
ಸೂರ್ಯನ ಬೆಳಕಿನಲ್ಲಿ ನೆರಳು ದೂರವಾದರೂ,
ಅದರ ಮಾತುಗಳು ಮನದೊಳಗೆ ಉಳಿದವು.

ನನ್ನೊಳಗಿನ ನನ್ನನ್ನೇ ಇಂದು ನಾನು ಕಂಡೆ,
ಮೌನದ ಕನ್ನಡಿಯಲ್ಲಿ ಹೊಸ ಬದುಕನು ಕಂಡೆ.
ನೆರಳಿನೊಂದಿಗೆ ನಡೆದ ಆ ಸಂಭಾಷಣೆಯು,
ನನ್ನ ಬದುಕಿಗೆ ನೀಡಿತು ಹೊಸ ಅರ್ಥವೊಂದು.

ಅಕ್ಟೋಬರ್ 28ರಂದು ಕುಷ್ಟಗಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಯುವ ಸಾಧಕರಿಗೆ ಸನ್ಮಾನ, ರುದ್ರಾಭಿಷೇಕ ಹಾಗೂ ಸಂಗೀತ ರಸಮಂಜರಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಮಹರ್ಷಿ ವಾಲ್ಮೀಕಿ ಜಯಂತಿಯ ಅಂಗವಾಗಿ ಕುಷ್ಟಗಿ ತಾಲೂಕು ವಾಲ್ಮೀಕಿ ಸಮಾಜದ ಯುವ ಘಟಕದ ವತಿಯಿಂದ ಅಕ್ಟೋಬರ್ 28ರಂದು ಪಟ್ಟಣದ ಗಜೇಂದ್ರಗಡ ರಸ್ತೆಯಲ್ಲಿರುವ ಶ್ರೀ ವಾಲ್ಮೀಕಿ ಧ್ಯಾನ ಮಂದಿರದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.



ಅಂದು ಶ್ರೀ ಮಹರ್ಷಿ ವಾಲ್ಮೀಕಿ ಅವರ ಮೂರ್ತಿಗೆ ರುದ್ರಾಭಿಷೇಕ, ವಿಶೇಷ ಪೂಜೆ, ಯುವ ಸಾಧಕರಿಗೆ ಸನ್ಮಾನ ಹಾಗೂ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಈ ಕುರಿತು ಮಾಹಿತಿ ನೀಡಿದ ಕುಷ್ಟಗಿ ತಾಲೂಕು ವಾಲ್ಮೀಕಿ ಸಮಾಜದ ಯುವ ಘಟಕದ ಅಧ್ಯಕ್ಷ ನಾಗರಾಜ ನಾಯಕ ಅವರು, ಸಮಾಜದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಯುವ ಸಾಧಕರನ್ನು ಗೌರವಿಸಿ, ಪ್ರೋತ್ಸಾಹಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು. ಎಲ್ಲರೂ ಒಗ್ಗಟ್ಟಿನಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಬಳಗಾನೂರು ಪೊಲೀಸ್ ಠಾಣೆಯಲ್ಲಿ ಸಂಪ್ರದಾಯದ ಸೊಬಗು; ಸಂಭ್ರಮದಿಂದ ವಿಜಯದಶಮಿ ಆಚರಣೆ

ಪಂಚೆ-ಶರ್ಟ್ ಧರಿಸಿ ಮಿಂಚಿದ ಪೊಲೀಸ್ ಸಿಬ್ಬಂದಿ ಕುಟುಂಬದ ಸದಸ್ಯರೊಂದಿಗೆ ಹಬ್ಬದ ಸಂಭ್ರಮ

❑ ನೈಜ್ಯ ದೆಸೆ ನ್ಯೂಸ್



ಬಳಗಾನೂರು: ಕರ್ತವ್ಯದ ಒತ್ತಡದ ನಡುವೆಯೂ ಸಂಪ್ರದಾಯ ಮತ್ತು ಸಂಸ್ಕೃತಿಗೆ ಆದ್ಯತೆ ನೀಡಿದ ಬಳಗಾನೂರು ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ವಿಜಯದಶಮಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಪೊಲೀಸ್ ಸಿಬ್ಬಂದಿ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ ಹಬ್ಬದ ಸಂಭ್ರಮದಲ್ಲಿ ಭಾಗಿಯಾದರು. ಪುರುಷ ಸಿಬ್ಬಂದಿ ಪಂಚೆ ಮತ್ತು ಶರ್ಟ್ ಧರಿಸಿ ಗಮನ ಸೆಳೆದರೆ, ಮಹಿಳಾ ಸಿಬ್ಬಂದಿ ಹಾಗೂ ಕುಟುಂಬದ ಸದಸ್ಯರು ಸಾಂಪ್ರದಾಯಿಕ ಉಡುಪಿನಲ್ಲಿ ಭಾಗವಹಿಸಿ ಕಾರ್ಯಕ್ರಮದ ಸೊಬಗನ್ನು ಹೆಚ್ಚಿಸಿದರು.

ಸಾರ್ವಜನಿಕರ ಸುರಕ್ಷತೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿಯನ್ನು ನಿರಂತರವಾಗಿ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗೆ ಹಬ್ಬದ ಆಚರಣೆ ಪರಸ್ಪರ ಆತ್ಮೀಯತೆ ಬೆಸೆಯುವ ಸಂದರ್ಭವಾಯಿತು. ಕುಟುಂಬದ ಸದಸ್ಯರೊಂದಿಗೆ ಸಂತಸದ ಕ್ಷಣಗಳನ್ನು ಹಂಚಿಕೊಂಡ ಸಿಬ್ಬಂದಿ, ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು.

ವಿಜಯದಶಮಿ ಕೆಟ್ಟದರ ವಿರುದ್ಧ ಒಳ್ಳೆಯದರ ವಿಜಯವನ್ನು ಸಾರುವ ಹಬ್ಬವಾಗಿದ್ದು, ಸತ್ಯ, ಧರ್ಮ, ನ್ಯಾಯ ಹಾಗೂ ಸೌಹಾರ್ದತೆಯ ಸಂದೇಶವನ್ನು ನೀಡುತ್ತದೆ. ಇಂತಹ ಹಬ್ಬಗಳ ಆಚರಣೆ ಸಿಬ್ಬಂದಿಯಲ್ಲಿ ಒಗ್ಗಟ್ಟು, ಪರಸ್ಪರ ಸಹಕಾರ ಮತ್ತು ಆತ್ಮೀಯತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ.

ಬಳಗಾನೂರು ಪೊಲೀಸ್ ಠಾಣೆಯ ಆವರಣದಲ್ಲಿ ನಡೆದ ಈ ಸಂಭ್ರಮದ ಆಚರಣೆ ಸಾಂಪ್ರದಾಯಿಕ ಉಡುಪುಗಳ ಆಕರ್ಷಣೆ ಹಾಗೂ ಹಬ್ಬದ ಉತ್ಸಾಹದಿಂದ ಗಮನ ಸೆಳೆಯಿತು.

2026ನೇ ಸಾಲಿನ 'ಪರಮ ಶ್ರೀ' ಪ್ರಶಸ್ತಿಗೆ ಪರಿಸರ ಪ್ರೇಮಿ ಅಮರೇಗೌಡ ಮಲ್ಲಾಪುರ ಆಯ್ಕೆ

ತುರವಿಹಾಳದ ಶ್ರೀ ಸದ್ಗುರು ಸರ್ವೇಶ್ವರ ಮಠದಿಂದ ಗೌರವ

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು: ಪರಿಸರ ಸಂರಕ್ಷಣೆ ಹಾಗೂ ಹಸಿರು ಕ್ರಾಂತಿಯ ಕಾರ್ಯಗಳಲ್ಲಿ ಮಹತ್ವದ ಕೊಡುಗೆ ನೀಡಿರುವ ವನಸಿರಿ ಫೌಂಡೇಷನ್ ರಾಯಚೂರು ಸಂಸ್ಥಾಪಕ ಅಧ್ಯಕ್ಷ, ಪರಿಸರ ಪ್ರೇಮಿ ಅಮರೇಗೌಡ ಮಲ್ಲಾಪುರ ಅವರು 2026ನೇ ಸಾಲಿನ ಪ್ರತಿಷ್ಠಿತ 'ಪರಮ ಶ್ರೀ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ತುರವಿಹಾಳ ಪಟ್ಟಣದ ಶ್ರೀ ಸದ್ಗುರು ಸರ್ವೇಶ್ವರ ಮಠದ ವತಿಯಿಂದ ನೀಡಲಾಗುವ ಈ ಪ್ರಶಸ್ತಿಗೆ ಅಮರೇಗೌಡ ಮಲ್ಲಾಪುರ ಅವರನ್ನು ಆಯ್ಕೆ ಮಾಡಲಾಗಿದೆ. ಕರ್ನಾಟಕ ಪರಿಸರ ರಾಜ್ಯ ಪ್ರಶಸ್ತಿ ಹಾಗೂ ಕರ್ನಾಟಕ ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಪುರಸ್ಕೃತರಾಗಿರುವ ಅವರು, ಪರಿಸರ ಸಂರಕ್ಷಣೆ ಮತ್ತು ಗಿಡಮರಗಳ ಬೆಳೆಸುವ ಕಾರ್ಯಗಳ ಮೂಲಕ ಗುರುತಿಸಿಕೊಂಡಿದ್ದಾರೆ.

ಮಠದ ಪರಮ ಪೂಜ್ಯ ಶ್ರೀ ಗುರು ಗುಂಡಯ್ಯ ಅಪ್ಪಯ್ಯನವರು, ಮಾತೋಶ್ರೀ ಶ್ರೀ ಈರಮ್ಮ ಅಮ್ಮನವರು ಹಾಗೂ ದಾಸೋಹ ಮೂರ್ತಿ ಶ್ರೀ ಗುರು ರಾಚಯ್ಯ ತಾತನವರ ಪುಣ್ಯಾರಾಧನೆಯ ಅಂಗವಾಗಿ ಅಕ್ಟೋಬರ್ 25ರ ಭಾನುವಾರ ನಡೆಯಲಿರುವ 177ನೇ ಜಾತ್ರಾ ಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜರುಗಲಿದೆ. ಇದೇ ಸಂದರ್ಭದಲ್ಲಿ 117ನೇ ವಚನ ಪ್ರವಚನ, ತುಲಾಭಾರ ಹಾಗೂ 'ನಿಶ್ಯಬ್ದ ಬ್ರಹ್ಮ ವಚನ ಸಂಪುಟ' ಪುಸ್ತಕದ ಲೋಕಾರ್ಪಣೆ ಸಮಾರಂಭವೂ ನಡೆಯಲಿದೆ.

ಈ ಧಾರ್ಮಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಕ್ಕೆ ಅಮರೇಗೌಡ ಮಲ್ಲಾಪುರ ಅವರನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀ ಸದ್ಗುರು ಸರ್ವೇಶ್ವರ ಮಠದ ಸದ್ಗುರು ಶ್ರೀ ಗುರು ಗುಂಡಯ್ಯ ಅಪ್ಪಯ್ಯನವರು ಹಾಗೂ ಭಕ್ತವೃಂದದವರು ಸಿಂಧನೂರಿನ ವನಸಿರಿ ಫೌಂಡೇಷನ್ ಕಾರ್ಯಾಲಯಕ್ಕೆ ಭೇಟಿ ನೀಡಿ, ಅಮರೇಗೌಡ ಮಲ್ಲಾಪುರ ಅವರಿಗೆ ವಿಶೇಷ ಆಹ್ವಾನ ಪತ್ರಿಕೆ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು.

ಪರಿಸರ ಸಂರಕ್ಷಣೆಯ ಸೇವೆಯನ್ನು ಗುರುತಿಸಿ ಮಠದ ವತಿಯಿಂದ ನೀಡಲಾಗುತ್ತಿರುವ ಈ ಗೌರವವು ಪರಿಸರ ಪ್ರೇಮಿಗಳಿಗೆ ಹಾಗೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವವರಿಗೆ ಪ್ರೇರಣೆಯಾಗಲಿದೆ.

ಮೈಸೂರು ದಸರಾ ದೀಪಾಲಂಕಾರ 10 ದಿನ ವಿಸ್ತರಣೆ, 100 ಅತ್ಯುತ್ತಮ ರೀಲ್ಸ್‌ಗಳಿಗೆ ಪ್ರಶಸ್ತಿ : ಸಿಎಂ ಡಿ.ಕೆ.ಶಿವಕುಮಾರ್

❑ ನೈಜ್ಯ ದೆಸೆ ನ್ಯೂಸ್



ಬೆಂಗಳೂರು,: ಮೈಸೂರು ದಸರಾ ದೀಪಾಲಂಕಾರ ವೀಕ್ಷಣೆಗೆ ಸಾರ್ವಜನಿಕರಿಂದ ಹೆಚ್ಚಿನ ಬೇಡಿಕೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ದೀಪಾಲಂಕಾರದ ಅವಧಿಯನ್ನು 10 ದಿನಗಳ ಕಾಲ ವಿಸ್ತರಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ದಸರಾದ ದೀಪಾಲಂಕಾರವನ್ನು ವೀಕ್ಷಿಸಲು ಪ್ರತಿದಿನ ಲಕ್ಷಾಂತರ ಜನರು ಆಗಮಿಸುತ್ತಿದ್ದಾರೆ. ಸಾರ್ವಜನಿಕರ ಒತ್ತಾಯದ ಮೇರೆಗೆ ದೀಪಾಲಂಕಾರದ ಅವಧಿಯನ್ನು ಹತ್ತು ದಿನಗಳ ಕಾಲ ವಿಸ್ತರಣೆ ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು. ಇದೇ ವೇಳೆ ಯುವ ಜನತೆಯನ್ನು ಉತ್ತೇಜಿಸಲು ವಿನೂತನ ಸ್ಪರ್ಧೆಯೊಂದನ್ನು ಘೋಷಿಸಿದ ಸಿಎಂ, "ದಸರಾ ವೀಕ್ಷಿಸಲು ಬರುವ ಸಾರ್ವಜನಿಕರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮಾಡಿ ಹಾಕಬೇಕು. ಆರಂಭದಿಂದ ಕೊನೆಯವರೆಗೆ ದಸರಾದಲ್ಲಿ ತಮಗೆ ಇಷ್ಟವಾದ ವಿಚಾರಗಳನ್ನು ರೀಲ್ಸ್ ಮೂಲಕ ತಿಳಿಸಬೇಕು. ಇಂತಹ ನೂರು ಅತ್ಯುತ್ತಮ ರೀಲ್ಸ್ ಗಳಿಗೆ ಪ್ರಶಸ್ತಿ ಹಾಗೂ ಅವಾರ್ಡ್ ನೀಡಲು ತೀರ್ಮಾನಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು #MysuruDasara2026 ಟ್ಯಾಗ್ ಮಾಡಬೇಕು" ಎಂದು ತಿಳಿಸಿದರು.

ವಿಯೆಟ್ನಾಂಗೆ ಹಾರಿದ ರಾಹುಲ್ ಗಾಂಧಿ

❑ ನೈಜ್ಯ ದೆಸೆ ನ್ಯೂಸ್



ನವದೆಹಲಿ: ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿರುವ ನಡುವೆಯೇ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತೊಮ್ಮೆ ವಿದೇಶಕ್ಕೆ ಹಾರಿದ್ದಾರೆ.

ಇಂತಹ ಪ್ರಮುಖ ಬೆಳವಣಿಗೆಗಳ ನಡುವೆಯೂ ರಾಹುಲ್ ಗಾಂಧಿ ವಿಯೆಟ್ನಾಂಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.ನಿನ್ನೆ ಮಧ್ಯಾಹ್ನ 1.35ರ ಸುಮಾರಿಗೆ ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹನೋಯಿಗೆ ಪ್ರಯಾಣ ಬೆಳೆಸಿದ್ದಾರೆ ಎಂದು ಮೂಲಗಳನ್ನು ಆಧರಿಸಿ ಮಾಧ್ಯಮಗಳು ವರದಿ ಮಾಡಿವೆ. ಉತ್ತರ ಪ್ರದೇಶದ ರಾಯ್ ಬರೇಲಿ ಲೋಕಸಭಾ ಕ್ಷೇತ್ರದ ಸದಸ್ಯರಾಗಿರುವ ರಾಹುಲ್ ಗಾಂಧಿ, ವೈಯಕ್ತಿಕ ಭೇಟಿಗಾಗಿ ಹನೋಯಿಗೆ ತೆರಳಿದ್ದಾರೆಯೇ ಅಥವಾ ಅಲ್ಲಿ ನಡೆಯುವ ಯಾವುದಾದರೂ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆಯೇ? ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಕುರಿತು ಕಾಂಗ್ರೆಸ್ ಪಕ್ಷದಿಂದ ಯಾವುದೇ ಅಧಿಕೃತ ಹೇಳಿಕೆಯೂ ಬಂದಿಲ್ಲ. ರಾಹುಲ್ ಗಾಂಧಿ ಅವರ ವಿದೇಶ ಪ್ರವಾಸಗಳು ಆಗಾಗ್ಗೆ ಚರ್ಚೆಗೆ ಗ್ರಾಸವಾಗುತ್ತಲೇ ಬಂದಿವೆ.

ಬಿಜೆಪಿ ಇದೇ ವಿಷಯವನ್ನ ಮುಂದಿಟ್ಟುಕೊಂಡು ಕಾಂಗ್ರೆಸ್ ನಾಯಕನನ್ನ ಟೀಕಿಸುತ್ತಾ ಬರುತ್ತಿದೆ. ವಿದೇಶಿ ಕಾರ್ಯಕ್ರಮಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸರ್ಕಾರವನ್ನು ಟೀಕಿಸುವ ಮೂಲಕ ರಾಹುಲ್ ಗಾಂಧಿ ಭಾರತದ ವರ್ಚಸ್ಸಿಗೆ ಧಕ್ಕೆ ತರುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸುತ್ತಲೇ ಇದೆ.

ಈ ವರ್ಷದ ಜನವರಿಯಲ್ಲಿಯೂ ರಾಹುಲ್ ಗಾಂಧಿ ವಿಯೆಟ್ನಾಂಗೆ ಭೇಟಿ ನೀಡಿದ್ದರು. ಆಗ, ಅವರನ್ನು ವಿದೇಶಿ ಕಾರ್ಯಕ್ರಮಗಳಿಗೆ ಆಹ್ವಾನಿಸುವವರು ಯಾರೆಂಬುದನ್ನು ಕಾಂಗ್ರೆಸ್ ಬಹಿರಂಗಪಡಿಸಬೇಕು ಎಂದು ಬಿಜೆಪಿ ಆಗ್ರಹಿಸಿತ್ತು.

ಮಳೆ ಇಲ್ಲದೆ ಬೆಳೆ ಇಲ್ಲ ಮೇವು, ನೀರಿಲ್ಲದೆ ಜಾನುವಾರು ಮಾರಾಟಕ್ಕೆ ಮುಂದಾದ ಕುಷ್ಟಗಿ ರೈತರು

ಬರದ ಹೊಡೆತಕ್ಕೆ ಕಂಗಾಲಾದ ಅನ್ನದಾತರು ಜಾನುವಾರುಗಳ ಬೆಲೆಯಲ್ಲೂ ಭಾರಿ ಕುಸಿತ

❑ ನೈಜ್ಯ ದೆಸೆ ನ್ಯೂಸ್



ಕುಷ್ಟಗಿ: ತಾಲೂಕನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಈ ವರ್ಷ ಮಳೆಯ ಕೊರತೆಯಿಂದ ಕೃಷಿ ಚಟುವಟಿಕೆಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ವಾಡಿಕೆಗಿಂತ ಶೇ.80ರಷ್ಟು ಮಳೆ ಕೊರತೆಯಾಗಿದೆ ಎಂಬ ವರದಿಗಳ ನಡುವೆ, ಮೆಕ್ಕೆಜೋಳ, ಸಜ್ಜೆ, ಹತ್ತಿ, ತೊಗರಿ ಸೇರಿದಂತೆ ವಿವಿಧ ಬೆಳೆಗಳು ನಿರೀಕ್ಷಿತ ಇಳುವರಿ ನೀಡುತ್ತಿಲ್ಲ.

ಇದರ ಪರಿಣಾಮವಾಗಿ ರೈತರು ಬೆಳೆದ ಬೆಳೆಗಳಿಂದ ಆದಾಯವಿಲ್ಲದೆ, ಜಾನುವಾರುಗಳನ್ನು ಸಾಕಲು ಮೇವು ಮತ್ತು ನೀರು ಸಿಗದೆ ಪರದಾಡುವಂತಾಗಿದೆ. ಪ್ರತಿವರ್ಷ ಉತ್ತಮ ಮಳೆಯ ನಿರೀಕ್ಷೆಯಲ್ಲಿ ಕೃಷಿ ಮಾಡುವ ರೈತರಿಗೆ ಈ ಬಾರಿ ಮುಂಗಾರು ಕೈಕೊಟ್ಟಿದೆ. ಜಮೀನುಗಳಲ್ಲಿ ಬೆಳೆಗಳು ಹಸಿರಾಗಿ ಕಾಣುತ್ತಿದ್ದರೂ, ನಿರೀಕ್ಷಿತ ಇಳುವರಿ ದೊರೆಯುವ ಭರವಸೆ ಇಲ್ಲವಾಗಿದೆ. ಜಾನುವಾರುಗಳಿಗೆ ಆಹಾರವಾಗುತ್ತಿದ್ದ ಮೆಕ್ಕೆಜೋಳದ ದಂಟು, ಸಜ್ಜೆ ಮತ್ತು ಶೇಂಗಾದ ಹೊಟ್ಟು ಕೂಡ ಸಾಕಷ್ಟು ಪ್ರಮಾಣದಲ್ಲಿ ಸಿಗದಿರುವುದು ರೈತರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ.

ಮೇವು, ನೀರಿನ ಕೊರತೆ: ಜಾನುವಾರು ಮಾರಾಟ ಅನಿವಾರ್ಯ

ಮುಂಗಾರು ಮಳೆ ಮುಗಿದಿದ್ದು, ಹಿಂಗಾರು ಮಳೆಯ ನಿರೀಕ್ಷೆಯಲ್ಲಿರುವ ರೈತರು ಮುಂದಿನ ದಿನಗಳ ಬಗ್ಗೆ ಆತಂಕಗೊಂಡಿದ್ದಾರೆ. ಈಗಾಗಲೇ ಮೇವು ಮತ್ತು ನೀರಿನ ಸಮಸ್ಯೆ ಕಾಣಿಸಿಕೊಂಡಿದ್ದು, ಚಳಿಗಾಲ ಹಾಗೂ ಬೇಸಿಗೆಯಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡಬಹುದು ಎಂಬ ಭೀತಿ ರೈತರನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಅನೇಕ ರೈತರು ತಮ್ಮ ಜಾನುವಾರುಗಳನ್ನು ಮಾರಾಟ ಮಾಡಲು ಮುಂದಾಗಿದ್ದಾರೆ. ಉತ್ತರ ಕರ್ನಾಟಕದ ಪ್ರಮುಖ ಜಾನುವಾರು ಮಾರುಕಟ್ಟೆಗಳಲ್ಲಿ ಒಂದಾದ ಕುಷ್ಟಗಿ ಮಾರುಕಟ್ಟೆಯಲ್ಲಿ ಭಾನುವಾರ ಹಸು, ಎತ್ತು ಸೇರಿದಂತೆ ಸಾಕಷ್ಟು ಜಾನುವಾರುಗಳು ಮಾರಾಟಕ್ಕೆ ಬಂದಿದ್ದವು.

ಮಾರುಕಟ್ಟೆಗೆ ಬಂದಿದ್ದ ಬಹುತೇಕ ರೈತರ ಅಳಲು ಒಂದೇ ಆಗಿತ್ತು. ಜಾನುವಾರುಗಳನ್ನು ಪ್ರೀತಿಯಿಂದ ಸಾಕಿ ಬೆಳೆಸಿದ್ದೇವೆ. ಆದರೆ ಅವುಗಳಿಗೆ ಮೇವು ಮತ್ತು ನೀರು ಒದಗಿಸಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಿದೆ. ಕಣ್ಮುಂದೆಯೇ ಅವುಗಳು ಕಷ್ಟಪಡುವುದನ್ನು ನೋಡಲು ಸಾಧ್ಯವಾಗುತ್ತಿಲ್ಲ. ಮುಂದಿನ ಮುಂಗಾರು ಉತ್ತಮವಾದರೆ ಮತ್ತೆ ಜಾನುವಾರುಗಳನ್ನು ಖರೀದಿಸುತ್ತೇವೆ ಎಂದು ರೈತರು ನೋವು ತೋಡಿಕೊಂಡರು. ಜಾನುವಾರುಗಳ ಬೆಲೆಯಲ್ಲಿ ಭಾರಿ ಕುಸಿತ ಒಂದೆಡೆ ಮಳೆಯಿಲ್ಲದೆ ಬೆಳೆ ಕೈಕೊಟ್ಟಿದ್ದರೆ, ಮತ್ತೊಂದೆಡೆ ಜಾನುವಾರುಗಳನ್ನು ಸಾಕಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಜಾನುವಾರುಗಳನ್ನು ಮಾರಾಟಕ್ಕೆ ತಂದಿರುವ ರೈತರಿಗೆ ಮಾರುಕಟ್ಟೆಯಲ್ಲಿ ನಿರೀಕ್ಷಿತ ಬೆಲೆ ಸಿಗುತ್ತಿಲ್ಲ.

ಮುಂಗಾರು ಆರಂಭದಲ್ಲಿ ಉತ್ತಮ ಬೆಲೆ ಹೊಂದಿದ್ದ ಹಸು, ಎಮ್ಮೆ ಮತ್ತು ಎತ್ತುಗಳ ದರದಲ್ಲಿ ಈಗ ಗಣನೀಯ ಕುಸಿತ ಕಂಡುಬಂದಿದೆ.

ಕಳೆದ ಮುಂಗಾರಿನಲ್ಲಿ ಸುಮಾರು 1.50 ಲಕ್ಷ ನೀಡಿ ಖರೀದಿಸಿದ್ದ ಎತ್ತುಗಳನ್ನು ಈಗ ಕೇವಲ ?60 ಸಾವಿರ 45 ಸಾವಿರಕ್ಕೆ ಮಾರಾಟ ಮಾಡುವ ಪರಿಸ್ಥಿತಿ ಎದುರಾಗಿದೆ ಎಂದು ರೈತರು ಅಳಲು ತೋಡಿಕೊಂಡರು. ಸಾಲ ಮಾಡಿ ಬಿತ್ತನೆ ಮಾಡಿದ್ದ ರೈತರಿಗೆ ಮಳೆ ಕೈಕೊಟ್ಟಿರುವುದರಿಂದ ಕೃಷಿಯಲ್ಲಿ ನಷ್ಟವಾಗಿದೆ. ಸಾಲಗಾರರು ಸಾಲ ಮರುಪಾವತಿಗೆ ಒತ್ತಡ ಹೇರುತ್ತಿರುವ ಹಿನ್ನೆಲೆಯಲ್ಲಿ, ಕೆಲವರು ಅನಿವಾರ್ಯವಾಗಿ ಜಾನುವಾರುಗಳನ್ನು ಮಾರಾಟ ಮಾಡಿ ಸಾಲ ತೀರಿಸಲು ಮುಂದಾಗಿದ್ದಾರೆ. ಹಿಂಗಾರು ಮಳೆಯ ನಿರೀಕ್ಷೆಯಲ್ಲೂ ಆತಂಕ ರೈತ ರಮೇಶ ಗಡಾದ ಮಾತನಾಡಿ, "ಜಾನುವಾರುಗಳಿಗೆ ಮೇವು ಮತ್ತು ನೀರಿಲ್ಲ. ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಬೇಕು ಎಂದರೂ ಜಮೀನುಗಳು ಬಿತ್ತನೆಗೆ ಹದವಾಗಿಲ್ಲ. ಮುಂಗಾರು ಮಳೆ ಕೈಕೊಟ್ಟಿದೆ.

ಇಂತಹ ಪರಿಸ್ಥಿತಿಯಲ್ಲಿ ಜಾನುವಾರುಗಳನ್ನು ಹೇಗೆ ಸಾಕಬೇಕು ಎಂಬುದೇ ತಿಳಿಯುತ್ತಿಲ್ಲ. ಅದಕ್ಕಾಗಿ ಮಾರಾಟ ಮಾಡಲು ಬಂದಿದ್ದೇವೆ. ಮುಂದಿನ ಮುಂಗಾರು ಮಳೆ ಉತ್ತಮವಾಗಿ ಬಂದರೆ ಮತ್ತೆ ಎರಡು ಎತ್ತುಗಳನ್ನು ಖರೀದಿಸುತ್ತೇವೆ" ಎಂದು ಬೇಸರ ವ್ಯಕ್ತಪಡಿಸಿದರು. ಮತ್ತೊಬ್ಬ ರೈತ ತನ್ನ ಅಳಲನ್ನು ತೋಡಿಕೊಳ್ಳುತ್ತಾ, "ಜಮೀನುಗಳಲ್ಲಿ ಬೆಳೆ ಇಲ್ಲ, ಕುಡಿಯಲು ನೀರಿಲ್ಲ. ಜಾನುವಾರುಗಳಿಗೆ ಮೇವು, ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಅವು ನಮ್ಮ ಕಣ್ಮುಂದೆಯೇ ಸಂಕಷ್ಟ ಅನುಭವಿಸುವುದನ್ನು ನೋಡಲಾಗುತ್ತಿಲ್ಲ. ಹೀಗಾಗಿ ಅನಿವಾರ್ಯವಾಗಿ ಮಾರಾಟಕ್ಕೆ ತಂದಿದ್ದೇವೆ. ಲಕ್ಷಾಂತರ ರೂಪಾಯಿ ಬೆಲೆಬಾಳುವ ಜಾನುವಾರುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಹಿಂಗಾರು ಮಳೆಯಾದರೂ ಉತ್ತಮ ಬೆಳೆ ಬರುತ್ತದೆ ಎಂಬ ಖಚಿತತೆ ಇಲ್ಲ. ಮುಂದಿನ ಮುಂಗಾರು ಮಳೆ ಚೆನ್ನಾಗಿ ಬಂದರೆ ಮತ್ತೆ ಜಾನುವಾರುಗಳನ್ನು ಖರೀದಿಸಬೇಕಾಗಿದೆ.

ಇದು ರೈತರ ಬಿಡದ ಕರ್ಮವಾಗಿದೆ" ಎಂದು ನೋವು ವ್ಯಕ್ತಪಡಿಸಿದರು.

ರೈತರ ನೆರವಿಗೆ ಧಾವಿಸಬೇಕಿದೆ ಸರ್ಕಾರ ಮಳೆಯ ಕೊರತೆ, ಬೆಳೆ ನಷ್ಟ, ಸಾಲದ ಹೊರೆ, ಮೇವು ಮತ್ತು ನೀರಿನ ಅಭಾವದಿಂದ ಕುಷ್ಟಗಿ ತಾಲೂಕಿನ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬರಪೀಡಿತ ತಾಲೂಕು ಎಂದು ಘೋಷಣೆಯಾಗಿದ್ದರೂ, ರೈತರ ಸಂಕಷ್ಟಕ್ಕೆ ಪರಿಹಾರ ದೊರೆಯಬೇಕೆಂಬ ನಿರೀಕ್ಷೆ ಹೆಚ್ಚಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಲ್ಲಿನ ಮೇವು ಮತ್ತು ಕುಡಿಯುವ ನೀರಿನ ಲಭ್ಯತೆಯನ್ನು ಪರಿಶೀಲಿಸಿ, ಅಗತ್ಯವಿರುವ ಕಡೆ ಮೇವು ಬ್ಯಾಂಕ್‌ಗಳನ್ನು ಆರಂಭಿಸುವುದು, ಜಾನುವಾರುಗಳಿಗೆ ನೀರಿನ ವ್ಯವಸ್ಥೆ ಕಲ್ಪಿಸುವುದು ಹಾಗೂ ಅರ್ಹ ರೈತರಿಗೆ ಬೆಳೆ ನಷ್ಟ ಪರಿಹಾರ ಮತ್ತು ಬರ ಪರಿಹಾರವನ್ನು ತ್ವರಿತವಾಗಿ ಒದಗಿಸುವತ್ತ ಕ್ರಮ ಕೈಗೊಳ್ಳಬೇಕಿದೆ. ಬೆಳೆ ಕೈಕೊಟ್ಟಿದ್ದರಿಂದ ಜೀವನಾಧಾರವಾಗಿದ್ದ ಜಾನುವಾರುಗಳನ್ನೇ ಮಾರಾಟ ಮಾಡಬೇಕಾದ ಪರಿಸ್ಥಿತಿ ಬಂದಿರುವುದು ರೈತರ ಸಂಕಷ್ಟದ ಗಂಭೀರತೆಯನ್ನು ತೋರಿಸುತ್ತಿದೆ. ರೈತರ ಬದುಕು ಮತ್ತು ಜಾನುವಾರುಗಳ ರಕ್ಷಣೆಗೆ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕೆಂಬುದು ಅನ್ನದಾತರ ಒತ್ತಾಯವಾಗಿದೆ.

ನೇಮಕಾತಿ ಪ್ರಕಟಣೆ

DHFWS ಹಾಸನ ನೇಮಕಾತಿ 2026 ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ (Multi Purpose Worker) ಮತ್ತು ಫಾರ್ಮಸಿಸ್ಟ್ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಅಕ್ಟೋಬರ್ 20, 2026

DHFWS ಹಾಸನ ನೇಮಕಾತಿ 2026: ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ, ಫಾರ್ಮಸಿಸ್ಟ್ ಮತ್ತು ಅಉಊಔ ಹುದ್ದೆಗಳ ಒಟ್ಟು 24 ಖಾಲಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (DHFWS) ಹಾಸನವು, ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ, ಫಾರ್ಮಸಿಸ್ಟ್ ಮತ್ತು ಅಉಊಔ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕೋರಿದೆ. ಕರ್ನಾಟಕ ಸರ್ಕಾರದ ಅಡಿಯಲ್ಲಿ ಹಾಸನದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05–ನವೆಂಬರ್–2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: hassan.nic.in

ಪುರಾಣ ಪ್ರವಚನಗಳಿಂದ ಮಾನಸಿಕ ನೆಮ್ಮದಿ: ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ

❑ ನೈಜ್ಯ ದೆಸೆ ನ್ಯೂಸ್

ಹಾಲಾಪೂರ: ಗ್ರಾಮದಲ್ಲಿರುವ ಶ್ರೀ ದುಗ್ಗಮ್ಮದೇವಿ ದೇವಸ್ಥಾನದಲ್ಲಿ ಶ್ರೀ ರಾಜರಾಜೇಶ್ವರಿ, ಶ್ರೀದೇವಿಯ ಪುರಾಣವು ಕಳೆದ ಹತ್ತುದಿನಗಳಿಂದ ಶ್ರೀ ಕ–ರಿಯಪ್ಪ ಹಿರೆಕುರಬೂರು ನೇತೃತ್ವದಲ್ಲಿ ಹಾಲಾಪೂರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರ ಸಹಾಯ ಸಹಕಾರದಿಂದ ವಿಜೃಂಭಣೆಯಿಂದ ಜರುಗಿದೆ ಎಂದು ಕರಿಯಪ್ಪ ಹೀರೆಕುರುಬೂರು ತಿಳಿಸಿದರು.



ಪ್ರವಚನಕಾರರಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಬಸವನಬಾಗೇವಾಡಿ ಮಾತನಾಡಿ ನೆಮ್ಮದಿಯ ಜೀವನಕ್ಕೆ ಪುರಾಣ ಪ್ರವಚನ ತುಂಬಾ ಅವಶ್ಯಕ,ಧಾರ್ಮಿಕ ಕಾರ್ಯಕ್ರಮಗಳಿಂದ ಮನಸ್ಸಿಗೆ ನೆಮ್ಮದಿ ಸುಖ ಶಾಂತಿ ದೊರೆಯುತ್ತದೆ ಎಂದು ಹೇಳಿದರು. ಗವಾಯಿಗಳಾಗಿ ಶ್ರೀ ಅಮರೇಶ ಮೇಟಿ ನಾಗರಹಾಳ,ತಬಲವಾದಕರಾಗಿ ಶ್ರೀ ಮೌನೇಶ ಮೆಟ್ರಿ ಇವರಿಂದ ಶ್ರೀ ದೇವಿಯ ಪುರಾಣವು ನಿತ್ಯ ನೂರಾರು ಭಕ್ತರು ಪಾಲ್ಗೊಳ್ಳುತ್ತಾರೆ, ನಂತರ ಮಹಾಪ್ರಸಾದ ವ್ಯವಸ್ಥೆ ಇರುತ್ತದೆ .ಶ್ರೀ ದುಗ್ಗಮ್ಮದೇವಿ ದೇವಸ್ಥಾನವು ಊರಿಂದ ದೂರವಿದ್ದರೂ ದಿನಾಲೂ ನೂರಾರು ಮಹಿಳೆಯರು, ಮಕ್ಕಳು ಸೇರಿದಂತೆ ಅನೇಕರು ಪಾಲ್ಗೊಂಡು ಶ್ರೀ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ ಇದು ನನಗೆ ಸಂತೋಷದ ವಿಚಾರ ಎಂದು ಕರಿಯಪ್ಪ ಹಿರೇಕುರಬೂರು ತಿಳಿಸಿದರು.

ಹಬ್ಬದ ಸಡಗರದಲ್ಲಿ ಹೂವಿನ ಮಾರುಕಟ್ಟೆ ಕಳೆಕಳೆ: ಚೆಂಡು ಹೂವಿಗೆ ಭಾರಿ ಬೇಡಿಕೆ!

❑ ನೈಜ್ಯ ದೆಸೆ ನ್ಯೂಸ್

ಸಿರವಾರ: ದಸರಾ ಹಬ್ಬದ ಸಂಭ್ರಮದ ಹಿನ್ನೆಲೆಯಲ್ಲಿ ಸಿರವಾರ ಪಟ್ಟಣದ ಮಾರುಕಟ್ಟೆಯಲ್ಲಿ ಹೂವು, ಬಾಳೆ ಎಲೆ ಹಾಗೂ ಕುಂಬಳಕಾಯಿ ವ್ಯಾಪಾರ ಜೋರಾಗಿ ನಡೆಯುತ್ತಿದೆ. ಹಬ್ಬದ ಪೂಜಾ ಕಾರ್ಯಗಳಿಗೆ ಅಗತ್ಯವಿರುವ ಚೆಂಡು ಹೂವುಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂದಿದ್ದು, ಮಾರುಕಟ್ಟೆ ಜನರಿಂದ ತುಂಬಿ ತುಳುಕುತ್ತಿದೆ.



ಬೆಳಗ್ಗೆಯಿಂದಲೇ ರೈತರು ತಾವು ಬೆಳೆದ ಹೂವುಗಳನ್ನು ನೇರವಾಗಿ ಮಾರುಕಟ್ಟೆಗೆ ತಂದು ಮಾರಾಟ ಮಾಡುತ್ತಿದ್ದು, ಗ್ರಾಹಕರು ಹೂವುಗಳನ್ನು ಖರೀದಿಸಲು ಮುಗಿಬಿದ್ದಿದ್ದಾರೆ. ದಸರಾ ಹಬ್ಬದ ಹಿನ್ನೆಲೆಯಲ್ಲಿ ಮನೆಗಳು, ಅಂಗಡಿಗಳು ಹಾಗೂ ವಿವಿಧ ಪೂಜಾ ಸ್ಥಳಗಳ ಅಲಂಕಾರಕ್ಕಾಗಿ ಚೆಂಡು ಹೂವುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಹೂವುಗಳ ಜೊತೆಗೆ ಬಾಳೆ ಎಲೆ ಮತ್ತು ಕುಂಬಳಕಾಯಿಗಳ ಮಾರಾಟವೂ ಚುರುಕುಗೊಂಡಿದೆ. ಹಬ್ಬದ ಸಂಭ್ರಮದಿಂದ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ಹೆಚ್ಚಾಗಿದ್ದು, ರೈತರು ಹಾಗೂ ವ್ಯಾಪಾರಿಗಳಲ್ಲಿ ಸಂತಸ ಮನೆಮಾಡಿದೆ. ಒಟ್ಟಾರೆ, ದಸರಾ ಹಬ್ಬದ ಸಂಭ್ರಮ ಸಿರವಾರದ ಮಾರುಕಟ್ಟೆಗೆ ಹೊಸ ಕಳೆ ತಂದಿದ್ದು, ಹೂವುಗಳ ಖರೀದಿ ಭರದಿಂದ ಸಾಗುತ್ತಿದೆ.

ವಿದ್ಯಾರ್ಥಿಗಳು ಶಿಕ್ಷಣ ರಂಗದಲ್ಲಿ ಸಾಧಿಸಿ ಯಶಸ್ವಿಯಾಗಬೇಕು ಗಿರೀಶ ಮಂಗಳೂರು

❑ ನೈಜ್ಯ ದೆಸೆ ನ್ಯೂಸ್



ಕಮತಗಿ: ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಪಠ್ಯಪುಸ್ತಕದ ಜ್ಞಾನದ ಜೊತೆಗೆ ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ಕಲೆ, ಸಾಹಿತ್ಯ ಹಾಗೂ ವಿವಿಧ ಕೌಶಲ್ಯಗಳಲ್ಲಿಯೂ ಆಸಕ್ತಿ ಬೆಳೆಸಿಕೊಳ್ಳಬೇಕು. ಎಂದು ಬಾಗಲಕೋಟೆಯ ವಾಣಿಜ್ಯ ತೆರಿಗೆ ಅಧಿಕಾರಿ ಗಿರೀಶ ಮಂಗಳೂರು ಹೇಳಿದರು ಅವರು ದೇವಾಂಗ ಸಮಾಜ ಅಭಿವೃದ್ಧಿ ಸಮಿತಿ (ರಿ) ಕಮತಗಿ ಹಾಗೂ ಬನಶಂಕರಿ ಯವ ಸೇವಾ ಸಮಿತಿ ಕಮತಗಿ ಇವರ ಆಶಯದಲ್ಲಿ ಜರುಗಿದ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡ 90 ಕಿಂತ ಹೆಚ್ಚು ಅಂಕ ಗಳಿಸಿ ಪಾಸಾದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಮತ್ತು ಸಾಧಕರ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು ಗುರುಹಿರಿಯರನ್ನು ಗೌರವಿಸುವುದು, ತಂದೆ–ತಾಯಿಯರ ತ್ಯಾಗವನ್ನು ಅರಿತುಕೊಳ್ಳುವುದು,

ಉತ್ತಮ ಸ್ನೇಹಿತರ ಸಹವಾಸ ಹೊಂದುವುದು ಮತ್ತು ದುಶ್ಚಟಗಳಿಂದ ದೂರವಿರುವುದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಬಹಳ ಮುಖ್ಯ. ವಿದ್ಯಾರ್ಥಿಗಳು ತಮ್ಮ ಯಶಸ್ಸಿನ ಮೂಲಕ ತಂದೆ–ತಾಯಿಯರಿಗೆ ಹೆಮ್ಮೆ ತರಬೇಕು. ತಾವು ಕಲಿತ ಜ್ಞಾನವನ್ನು ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳಬೇಕು. ಉನ್ನತ ಹುದ್ದೆಗಳನ್ನು ಅಲಂಕ–ರಿಸುವುದರ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಾಪಾಡಿಕೊಂಡು, ಸಮಾಜದ ಬಡವರು ಮತ್ತು ಹಿಂದುಳಿದವರ ಏಳಿಗೆಗೂ ಕೈಜೋಡಿಸಬೇಕು.

ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಪೋಷಕರು, ಶಿಕ್ಷಕರು ಮತ್ತು ಸಮಾಜದ ಕರ್ತವ್ಯವಾಗಿದೆ. ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭಗಳು ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ, ಸಾಧಿಸುವ ಛಲ ಹಾಗೂ ಭವಿಷ್ಯದ ಬಗ್ಗೆ ಭರವಸೆಯನ್ನು ಮೂಡಿಸುತ್ತವೆ. ಇಂತಹ ಪ್ರೋತ್ಸಾಹವು ಇನ್ನಷ್ಟು ವಿದ್ಯಾರ್ಥಿಗಳಿಗೆ ಸಾಧನೆಯ ಹಾದಿಯಲ್ಲಿ ಮುನ್ನಡೆಯಲು ಪ್ರೇರಣೆಯಾಗುತ್ತದೆ ಎಂದು ಹೇಳಿದರು, ಕಾರ್ಯಕ್ರಮದ ಘನ ಉಪಸ್ಥಿತಿತನ್ನು ಬನಶಂಕರಿ ದೇವಸ್ಥಾನದ ಪ್ರಧಾನ ಅರ್ಚಕ ರಾಘವೇಂದ್ರಸ್ವಾಮಿ ದೇವಾಂಗಮಠ ವಹಿಸಿದ್ದರು ಕಮತಗಿ ಪಟ್ಟಣ ಪಂಚಾಯತ ಅಧ್ಯಕ್ಷ ಬಸವರಾಜ ಕುಂಬಳಾವತಿ ಉದ್ಘಾಟಿಸಿದರು, ಪಾಂಡುರಂಗ ಹೋಟಿ ಅಧ್ಯಕ್ಷತೆ ವಹಿಸಿದ್ದರು, ಪ. ಪಂ ಸದಸ್ಯ ಬಸವರಾಜ ದಂಡಾವತಿ ಕರ್ನಾಟಕ ರಾಜ್ಯ ದೇವಾಂಗ ಸಂಘದ ನೂತನ ನಿರ್ದೇಶಕ ಶ್ರೀಕಾಂತ ಧೂಪದ ವೇದಿಕೆಯಲ್ಲಿದ್ದರು

ಪ್ರತಿಭಾ ಪುರಸ್ಕಾರ – ಎಸ್ ಎಸ್ ಎಲ್ ಸಿ ಮತ್ತು ಪಿ ಯು ಸಿ ಯಲ್ಲಿ ಶೇ 90 ಕ್ಕಿಂತ ಹೆಚ್ಚಿನ ಅಂಕಗಳಿಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು ಮುಖಂಡರಾದ ವೀರಭದ್ರಪ್ಪ ಆರಿ, ಈರಣ್ಣ ಯರಗಲ್ಲ, ಟಾಕಪ್ಪ ಗಾಡದ, ಸಂತೋಷಕುಮಾರ್ ಗೌಡರ, ಸೇರಿದಂತೆ ಸಮಾಜದ ಯುವಕರು ಮಹಿಳೆಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು

ರಬಕವಿ ಬನಶಂಕರಿ ದೇವಿ ದರ್ಶನ ಪಡೆದ ಡಾ. ಉಮಾಶ್ರೀ

❑ ನೈಜ್ಯ ದೆಸೆ ನ್ಯೂಸ್



ರಬಕವಿ ಬನಹಟ್ಟಿ : ನಗರದ ಆರಾಧ್ಯ ದೇವತೆ ಬನಶಂಕರಿ ದೇವಿಯ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ಅಂಗವಾಗಿ ನೂರಾರು ಮುತ್ತೈದೀಯ–ರಿಗೆ ಊಡಿ ತುಂಬವ ಕಾರ್ಯಕ್ರಮ ನಂತರ ದೇವಿ ಬೆಳ್ಳಿ ಮೂತಿ9 ಪಾಲಕಿ ಸೇವೆ ಮಂಗಳಾರುತಿ ಸೇವೆ ಬಾಗಿಯಾದ ಶ್ರೀಮತಿ ಡಾ. ಉಮಾಶ್ರೀ ಅವರು ಬನಶಂಕರಿ ದೇವಿಯ ದರ್ಶನ ಪಡೆದು ದೇವಿಯ ಆಶೀರ್ವಾದ ಪಡೆದರು. ತದನಂತರ ಮಹಾ ಪ್ರಸಾದ ಪ್ರಾರಂಭವಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನವರಾತ್ರಿ ಉತ್ಸವವು ಶಕ್ತಿ, ಭಕ್ತಿ ಹಾಗೂ ನಾರಿಶಕ್ತಿಯ ಆರಾಧನೆಯ ಪವಿತ್ರ ಹಬ್ಬವಾಗಿದೆ. ದುಷ್ಟಶಕ್ತಿಯ ಸಂಹಾರ ಮತ್ತು ಧರ್ಮದ ವಿಜಯವನ್ನು ಸಾರುವ ನವರಾತ್ರಿ ಹಬ್ಬವು ಸಮಾಜದಲ್ಲಿ ಭಕ್ತಿ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ ಎಂದು ಶ್ರೀಮತಿ ಉಮಾಶ್ರೀ ಅವರು ಹೇಳಿದರು. ನಂತರ ದೈವ ಮಂಡಳಿ ಅವರು ಕೂಡಿ ಶಾಲು ಹೊದಿಸಿ ಹಾರ ಹಾಕಿ ಗೌರವ ಪೂರ್ವಕ ಸನ್ಮಾನ ಮಾಡಿದರು. 'ಬನಶಂಕರಿ ದೇವಿಯ ಕೃಪೆ ನಾಡಿನ ಜನತೆಗೆ ಸುಖ, ಶಾಂತಿ, ಸಮೃದ್ಧಿ ಹಾಗೂ ಆರೋಗ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸಿದರು. ದೇವಸ್ಥಾನದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು ಭಕ್ತರಲ್ಲಿ ಆಧ್ಯಾತ್ಮಿಕ ಭಾವನೆ ಮೂಡಿಸುವುದರ ಜೊತೆಗೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು. 'ಈ ಸಂದರ್ಭದಲ್ಲಿ ಬನಶಂಕರಿ ದೇವಸ್ಥಾನದ ಆಡಳಿತ ಮಂಡಳಿಯ ಪದಾಧಿಕಾರಿಗಳು, ಭಕ್ತರು ಹಿರಿಯರು ತಾಯಂದಿರು ಉಪಸ್ಥಿತರಿದ್ದರು.

2027ರಲ್ಲೇ ವಿಧಾನಸಭೆ ಚುನಾವಣೆ ಸಾಧ್ಯತೆ : ಎಚ್.ಡಿ.ಕುಮಾರಸ್ವಾಮಿ ಭವಿಷ್ಯ

❑ ನೈಜ್ಯ ದೆಸೆ ನ್ಯೂಸ್



ಹಾಸನ: ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದ ನಡವಳಿಕೆ ಹಾಗೂ ಪ್ರಸ್ತುತ ಬೆಳವಣಿಗೆಗಳನ್ನು ಗಮನಿಸಿದರೆ, 2028ರ ಬದಲಿಗೆ 2027ರಲ್ಲೇ ವಿಧಾನಸಭೆ ಚುನಾವಣೆ ನಡೆಯುವ ಪರಿಸ್ಥಿತಿ ನಿರ್ಮಾಣವಾಗಬಹುದು. ಜೆಡಿಎಸ್–ಬಿಜೆಪಿ ಸಮಿಶ್ರ ಸರ್ಕಾರ ರಚನೆಯಾಗಲಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಭವಿಷ್ಯ ನುಡಿದರು.


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಒಗ್ಗೂಡಿ ಸಮಿಶ್ರ ಸರ್ಕಾರ ರಚಿಸಲಿವೆ ಎಂಬ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಹೇಳಿಕೆಗೆ ಸಹಮತ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ಬೆಳವಣಿಗೆಗಳು ಹಾಗೂ ಸರ್ಕಾರ ನಡೆಸುತ್ತಿರುವವರ ಮನೋಭಾವವನ್ನು ಗಮನಿಸಿಯೇ ಯಡಿಯೂರಪ್ಪ ಪ್ರತಿಕ್ರಿಯಿಸಿದ್ದಾರೆ. ಅವರ ಹೇಳಿಕೆ ಸಹಜವಾದುದು. ಅದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ ಎಂದರು.

ರಾಜ್ಯ ಸರ್ಕಾರ ಸಾಗುತ್ತಿರುವ ಹಾದಿಯನ್ನು ಗಮನಿಸಿದರೆ, ಮುಂದಿನ ವರ್ಷವೇ ಈ ಸರ್ಕಾರ ಅಂತ್ಯವಾಗಬಹುದು. ಸರ್ಕಾರದ ನಡವಳಿಕೆಯಿಂದ ಬೇಸತ್ತ ಜನರೇ ಅದನ್ನು ಅಧಿಕಾರದಿಂದ ಕೆಳಗಿಳಿಸುವ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಹೇಳಿದರು. ತಮ ಹೇಳಿಕೆಗಳಲ್ಲಿ ಸತ್ಯವಿದೆ ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ್ ಪ್ರತಿಕ್ರಿಯೆ ಕು–ರಿತು ಮಾತನಾಡಿದ ಕುಮಾರಸ್ವಾಮಿ, ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳೇ ಸರ್ಕಾರದ ಪತನಕ್ಕೆ ಕಾರಣವಾಗಬಹುದು ಎಂದರು.

ಎಚ್.ಡಿ. ಕುಮಾರಸ್ವಾಮಿ ಅವ–ರಿಗೆ ರಕ್ತ ಕುದಿಯುತ್ತಿದ್ದರೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದೆ ಎಂಬ ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಅವರ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲ. ಇಂಗ್ಲಿಷ್ ಬರುವುದಿಲ್ಲವೆಂದಾದರೆ ಉರ್ದು ಚಾನೆಲ್‌ಗೆ ಹೋಗಿ ಮಾತನಾಡಲು ಹೇಳಿ ಎಂದು ತಿರುಗೇಟು ನೀಡಿದರು.

ಕನ್ನಡಿಗರಿಗೆ ಬೇಷರತ್ ಕ್ಷಮೆಯಾಚಿಸುವುದಾಗಿ ಹೇಳಿದ ಗಾಯಕ ಸೋನು ನಿಗಮ್

❑ ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ಗಾಯಕ ಸೋನು ನಿಗಮ್ ಇಂದು ನನ್ನೊಂದಿಗೆ ಮಾತಾಡಿದರು. ತಾವು ಹಿಂದೆ ಮಾಡಿದ ಒಂದು ಮಾತು ಕನ್ನಡಿಗರನ್ನು ಹೇಗೆ ನೋಯಿಸಿದೆ ಎಂಬುದು ಅವ–ರಿಗೆ ಅರ್ಥವಾಗಿದೆ. ಬೇಷರತ್ತಾಗಿ ಕ್ಷಮೆ ಯಾಚಿಸುವುದಾಗಿ ಹೇಳಿದ್ದಾರೆ ಎಂದು ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ತಿಳಿಸಿದ್ದಾರೆ.

ಈ ಬಗ್ಗೆ ಎಕ್ಸ್ ನಲ್ಲಿ ಪೋಸ್ಟ್ ಹಾಕಿರುವ ಟಿ.ಎ. ನಾರಾಯಣಗೌಡರು, ನಾನು ಹಿಂದೆಯೂ ಹೇಳಿದ್ದೇನೆ. ನಾವೆಲ್ಲರೂ ಸೋನು ನಿಗಮ್ ಅವರ ಹಾಡುಗಳನ್ನು ಇಷ್ಟಪಟ್ಟವರು. ಅವರ ಕುರಿತು ವೈಯಕ್ತಿಕವಾಗಿ ಯಾವ ದ್ವೇಷ, ಮುನಿಸು ನಮಗೆ ಇರಲಿಲ್ಲ. ಆ ಒಂದು ಮಾತನ್ನು ಅರಗಿಸಿಕೊಳ್ಳಲು ನಮ್ಮಿಂದ ಆಗಿರಲಿಲ್ಲ. ಅದಕ್ಕಾಗಿ ನಮ್ಮ ಪ್ರತಿಭಟನೆ, ಆಕ್ರೋಶ ಸಹಜವಾಗೆ ಇತ್ತು. ಇದೀಗ ಅವರು ಕ್ಷಮೆ ಯಾಚಿಸಿದ್ದಾರೆ. ಇಲ್ಲಿಗೆ ಇದನ್ನು ಮುಗಿಸುವುದು ಒಳ್ಳೆಯದು. ಕ್ಷಮೆ ಕೇಳಿದವರನ್ನು ಕ್ಷಮಿಸುವುದು ಕನ್ನಡಿಗರ ಔದಾರ್ಯ, ಸಂಸ್ಕಾರ ಎಂದಿದ್ದಾರೆ. ಘಂಟಸಾಲ, ಪಿ ಬಿ. ಶ್ರೀನಿವಾಸ್, ಯೇಸುದಾಸ್, ಎಸ್. ಜಾನಕಿ, ವಾಣಿ ಜಯರಾಮ್, ಚಿತ್ರಾ ಹೀಗೆ ಅದ್ಭುತ ಗಾಯಕರು ಕನ್ನಡಿಗರಲ್ಲದೆ ಇದ್ದರೂ ನಾವು ಅವರನ್ನು ಅಪಾರವಾಗಿ ಪ್ರೀತಿಸಿದ್ದೇವೆ. ಅವರು ನಮ್ಮ ಕನ್ನಡ ಚಿತ್ರಸಂಗೀತವನ್ನು ಶ್ರೀಮಂತಗೊಳಿಸಿದ ಮಹಾನುಭಾವರು. ಆ ಕೃತಜ್ಞತೆ ಸದಾ ಇರುತ್ತದೆ.

ಸೋನು ನಿಗಮ್ ಕೂಡ ಇದೇ ಸಾಲಿನಲ್ಲಿ ಬರುವ ಮಹಾ ಗಾಯಕರಲ್ಲಿ ಒಬ್ಬರು. ಈ ಕಹಿಘಟನೆಯನ್ನು ಮರೆತುಬಿಡೋಣ. ಕರ್ನಾಟಕ ರಕ್ಷಣಾ ವೇದಿಕೆ ಈ ಹೋರಾಟವನ್ನು ಇಲ್ಲಿಗೆ ನಿಲ್ಲಿಸುತ್ತದೆ. ಇದು ಎಲ್ಲರಿಗೂ ಒಂದು ಪಾಠ. ನಾನು ವೈಯಕ್ತಿಕವಾಗಿ ಸಂಗೀತ ಪ್ರೇಮಿ. ಸಂಗೀತ ಮನುಷ್ಯನ ಎಲ್ಲಾ ಸಂಕಟಗಳನ್ನು ಮರೆಸುವ ಸಂಜೀವಿನಿ. ಸೋನು ಅವರು ಇನ್ನಷ್ಟು ಕನ್ನಡ ಗೀತೆಗಳನ್ನು ಹಾಡಲಿ, ಕರ್ನಾಟಕದ ನೆಲದಲ್ಲಿ ಅವರ ಕಾರ್ಯಕ್ರಮಗಳು ನಡೆಯಲಿ. ಸಂಗೀತ ನಮ್ಮ ಬದುಕನ್ನು ಇನ್ನಷ್ಟು ಸಹನೀಯ ಗೊಳಿಸಲಿ, ಪ್ರೀತಿ ಗೆಲ್ಲಲಿ ಎಂದು ಹೇಳಿದ್ದಾರೆ.

ದಸರಾ, ಆಯುಧ ಪೂಜೆಗೆ ಬೆಲೆ ಏರಿಕೆಯ ಬಿಸಿ

ಕುಷ್ಟಗಿ ಮಾರುಕಟ್ಟೆಯಲ್ಲಿ ಹೂವು, ಹಣ್ಣು ಹಾಗೂ ಪೂಜಾ ಸಾಮಗ್ರಿಗಳ ದರ ಗಗನಕ್ಕೇರಿಕೆ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ದಸರಾ ಹಾಗೂ ಆಯುಧ ಪೂಜೆ ಹಬ್ಬದ ಹಿನ್ನೆಲೆಯಲ್ಲಿ ಕುಷ್ಟಗಿ ಪಟ್ಟಣದ ಮಾರುಕಟ್ಟೆಯಲ್ಲಿ ಹೂವು,

ಹಣ್ಣು ಹಾಗೂ ಪೂಜಾ ಸಾಮಗ್ರಿಗಳ ಬೆಲೆ ಏರಿಕೆಯಾಗಿದ್ದು, ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಅಕಾಲಿಕ ಮಳೆ ಹಾಗೂ ಇಳುವರಿ ಕೊರತೆಯಿಂದಾಗಿ ಮಾರುಕಟ್ಟೆಗೆ ಕೃಷಿ ಉತ್ಪನ್ನಗಳ ಪೂರೈಕೆಯಲ್ಲಿ ವ್ಯತ್ಯಾಸ ಉಂಟಾಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ ಎನ್ನಲಾಗಿದೆ.



ಒಂದೆಡೆ ಮಳೆ ಕೊರತೆಯಿಂದ ಬೆಳೆಗಳಿಗೆ ನೀರಿಲ್ಲದೆ ರೈತರು ಸಂಕಷ್ಟ ಎದುರಿಸುತ್ತಿದ್ದರೆ, ಮತ್ತೊಂದೆಡೆ ದಸರಾ ಹಬ್ಬದ ಆಯುಧ ಪೂಜೆಗಾಗಿ ಅಗತ್ಯವಿರುವ ಬಾಳೆದಿಂಡು, ಮಾವಿನ ಎಲೆ, ಬೂದು ಕುಂಬಳಕಾಯಿ, ಹೂವು ಹಾಗೂ ಹಣ್ಣುಗಳ ಖರೀದಿಗೆ ಜನರು ಮಾರುಕಟ್ಟೆಗೆ ಮುಗಿಬಿದ್ದಿದ್ದಾರೆ. ಮಾರುಕಟ್ಟೆಯಲ್ಲಿ ಜನಜಂಗುಳಿ

ಆಯುಧ ಪೂಜೆಯ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ಕುಷ್ಟಗಿ ಪಟ್ಟಣದ ಮಾರುಕಟ್ಟೆಯಲ್ಲಿ ಜನಜಂಗುಳಿ ಹೆಚ್ಚಾಗಿತ್ತು. ಮನೆಗಳು, ಅಂಗಡಿಗಳು, ವಾಹನಗಳು ಹಾಗೂ ಕೃಷಿ ಯಂತ್ರೋಪಕರಣಗಳನ್ನು ಸ್ವಚ್ಛಗೊಳಿಸಿ ಪೂಜೆಗೆ ಸಿದ್ಧತೆ ಮಾಡಿಕೊಳ್ಳುವ ದೃಶ್ಯಗಳು ಕಂಡುಬಂದವು. ಹಬ್ಬದ ಸಂಭ್ರಮದ ನಡುವೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿರುವುದು ಗ್ರಾಹಕ–ರಿಗೆ ಹೆಚ್ಚುವರಿ ಆರ್ಥಿಕ ಹೊರೆಯಾಗಿದೆ.

ಬಾಳೆದಿಂಡು, ಮಾವಿನ ಎಲೆ, ಬೂದು ಕುಂಬಳಕಾಯಿ ದುಬಾರಿ

ಆಯುಧ ಪೂಜೆಯ ಸಂದರ್ಭದಲ್ಲಿ ವಾಹನಗಳು, ಯಂತ್ರೋಪಕರಣಗಳು ಹಾಗೂ ವಿವಿಧ ಉಪಕರಣಗಳಿಗೆ ಪೂಜೆ ಸಲ್ಲಿಸಲು ಬಳಸುವ ಬಾಳೆದಿಂಡು, ಮಾವಿನ ಎಲೆ ಮತ್ತು ಬೂದು ಕುಂಬಳಕಾಯಿಗಳ ಬೆಲೆಯೂ ಹೆಚ್ಚಾಗಿದೆ. ಮಾರುಕಟ್ಟೆಯಲ್ಲಿ ಕಂಡುಬಂದ ದರಗಳು: ಒಂದು ಜೊತೆ ಬಾಳೆದಿಂಡು: 100ರವರೆಗೆ. ಮಾವಿನ ಎಲೆ ಒಂದು ಕಟ್ಟು: 30ರಿಂದ 50. ಒಂದು ಬೂದು ಕುಂಬಳಕಾಯಿ: ಗಾತ್ರಕ್ಕೆ ಅನುಗುಣವಾಗಿ 100ರಿಂದ 150. ದುಬಾರಿ ದರದ ನಡುವೆಯೂ ಹಬ್ಬದ ಸಿದ್ಧತೆ ಹಬ್ಬದ ಹಿನ್ನೆಲೆಯಲ್ಲಿ ವ್ಯಾಪಾರ ಚಟುವಟಿ–ಕೆಗಳು ಚುರುಕುಗೊಂಡಿದ್ದು, ವ್ಯಾಪಾರಿಗಳು ಹೆಚ್ಚಿನ ವಹಿವಾಟಿನ ನಿರೀಕ್ಷೆಯಲ್ಲಿದ್ದಾರೆ.

ಮತ್ತೊಂದೆಡೆ, ಗ್ರಾಹಕರು ದುಬಾರಿ ದರದ ನಡುವೆಯೂ ಸಂಪ್ರದಾಯದಂತೆ ಪೂಜಾ ಸಾಮಗ್ರಿಗಳನ್ನು ಖರೀದಿಸುತ್ತಿದ್ದಾರೆ. ಒಟ್ಟಿನಲ್ಲಿ, ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಹಬ್ಬದ ಖರೀದಿಗೂ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಆದ–'ರೂ ಜನರು ದಸರಾ ಹಾಗೂ ಆಯುಧ ಪೂಜೆಯನ್ನು ಸಂಭ್ರಮದಿಂದ ಆಚ–'ರಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ವಚನ ದರ್ಶನ

ಶೂಲದ ಮೇಲಣ ವಿಭೋಗವೇನಾದಡೇನೊ?ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ!ತನ್ನಾತ್ಮ ತನಗೆ ಹಗೆಯಾದ ಮತ್ತೆಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ

"ಶೂಲದ ಮೇಲಣ ವಿಭೋಗವೇನಾದಡೇನೊ" ಎಂಬುದು ಭಕ್ತಿ ಭಂಡಾರಿ ಜಗಜ್ಯೋತಿ ಬಸವಣ್ಣನವರ ಒಂದು ಪ್ರಸಿದ್ಧವಾದ ವಚನವಾಗಿದೆ

ಶೂಲದ ಮೇಲಣ ವಿಭೋಗವೇನಾದಡೇನೊ?
ಮರಣದಂಡನೆಗೆ ಗುರಿಯಾಗಿ ಶೂಲದ (ಕತ್ತಿಯ ಮೊನೆ ಅಥ-ವಾ ಕಂಬದ) ಮೇಲೆ ನಿಂತಿರುವ ವ್ಯಕ್ತಿಗೆ ಎಂತಹ ರಾಜಭೋಗ, ರುಚಿಕರವಾದ ಊಟ ಅಥವಾ ಐಷಾರಾಮಿ ಸೌಲಭ್ಯಗಳನ್ನು ನೀಡಿದರೂ ಅದರಿಂದ ಏನು ಪ್ರಯೋಜನ? ಸಾವು ಎದು-ರಿಗಿರುವಾಗ ಆ ಭೋಗವೆಲ್ಲವೂ ವ್ಯರ್ಥ ಹಾಗೂ ಕ್ಷಣಿಕ.

ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ!
ಈ ಲೌಕಿಕ ಜಗತ್ತಿನ ಸಂಸಾರ ಮತ್ತು ಆಕರ್ಷಣೆಗಳು ಹಾವಾಡಿಗ ಹಾಗೂ ಹಾವಿನ ನಡುವಿನ ಸ್ನೇಹದ ಹಾಗೆ. ಹಾವಾಡಿಗನು ಹಾವನ್ನು ಎಷ್ಟು ಪ್ರೀತಿಯಿಂದ ಸಾಕಿದರೂ, ಅದು ಯಾವಾಗ ಕಚ್ಚಿ ಪ್ರಾಣ ತೆಗೆಯುತ್ತದೋ ತಿಳಿಯದು. ಹಾಗೆಯೇ ಸಂಸಾರದ ಸುಖವೂ ಯಾವಾಗ ದುಃಖವಾಗಿ ಕಾಡುತ್ತದೋ ಹೇಳಲಾಗದು.

ತನ್ನಾತ್ಮ ತನಗೆ ಹಗೆಯಾದ ಮತ್ತೆ ಬಿನ್ನಾಣವುಂಟೆ...?:
ಒಬ್ಬ ಮನುಷ್ಯನ ಸ್ವಂತ ಆತ್ಮವೇ (ಅವನ ಒಳಮನಸ್ಸು ಅಥವಾ ವಿವೇಕ) ಅವನಿಗೆ ಶತ್ರುವಾದ ಮೇಲೆ, ಅವನ ಬುದ್ಧಿವಂತಿ-ಕೆ ಅಥವಾ ಚಾತುರ್ಯದಿಂದ ಯಾವುದೇ ಪ್ರಯೋಜನವಿಲ್ಲ. ತನ್ನನ್ನು ತಾನು ಅರಿಯದವನಿಗೆ ಲೋಕದ ಜ್ಞಾನ ವ್ಯರ್ಥ.

ಮಹಾದಾನಿ ಕೂಡಲಸಂಗಮದೇವಾ ಬಸವಣ್ಣನವರು ತಮ್ಮ ಆರಾಧ್ಯ ದೈವವಾದ ಕೂಡಲಸಂಗಮದೇವನಲ್ಲಿ, ಇಂತಹ ಕ್ಷಣಿಕ ಸಂಸಾರದ ಮಾಯೆಯಿಂದ ತನ್ನನ್ನು ಪಾರುಮಾಡಿ ಒಳಿತನ್ನು ಕರುಣಿಸು ಎಂದು ಬೇಡಿಕೊಳ್ಳುತ್ತಾರೆ.
ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ಬನ್ನಿ ತಗೊಂಡು ಬಂಗಾರ ಆಗೋಣ!

ನಾಡಹಬ್ಬ ದಸರಾದ ಸಡಗರ-ಸಂಭ್ರಮ"

❑ ನೈಜ್ಯ ದೆಸೆ ನ್ಯೂಸ್



ಲೇ.. ಬಾರೋ ಮಾರಾಯ, ಹಬ್ಬ ಬಂತು ನೋಡ್ತಿಲ್ಲೇನು? ನಮ್ಮ ಕರುನಾಡಿನ ಹೆಮ್ಮೆಯ ಹಬ್ಬ, ಸಾಂಸ್ಕೃತಿಕ ವೈಭವದ ಪ್ರತೀಕವಾಗಿರುವ ದಸರಾ ಅಥವಾ ವಿಜಯದಶಮಿ ಅಂದ್ರೆ ಬರೀ ಹಬ್ಬ ಅಷ್ಟೇ ಅಲ್ಲ, ಅದು ನಮ್ಮ ಮಣ್ಣಿನ ಸಂಸ್ಕೃತಿಯ ಜೀವಾಳ. ನವರಾತ್ರಿಯ ಒಂಬತ್ತು ದಿನಗಳ ಕಾಲ ಸಡಗರದಿಂದ ನಡೆದು, ಕೊನೆಯ ದಿನ ವಿಜಯದಶಮಿಯಂದು ಸಮಾಪ್ತಿಯಾಗುವ ಈ ಹಬ್ಬ ನಮ್ಮ ಗ್ರಾಮೀಣ ಜನಪದರ ಜೀವನಾಡಿಯಾಗಿದೆ.
ಜಾನಪದ ಸಂಸ್ಕೃತಿಯಲ್ಲಿ ದಸರಾದ ಮರುಳಾಗಿಸುವ ಶೈಲಿ.

"ಹಬ್ಬ ಬಂತು ಹಬ್ಬ, ಬನ್ನಿ ಮರದ ಹಬ್ಬ..." ಅಂತ ನಮ್ಮ ಹಳ್ಳಿ ಕಡೆ ಹಾಡ್ತಾರಲ್ಲ, ಅದು ದಸರಾದ ಅಸಲಿ ಗಮ್ಮತ್ತು. ಹಳ್ಳಿಗಳಲ್ಲಿ ದುರ್ಗಾದೇವಿಯ ಮೂರ್ತಿಯನ್ನಿಟ್ಟು, ಒಂಬತ್ತು ದಿನವೂ ಪುರಾಣ, ದೇವಿ ಕಥೆಗಳು, ರಾತ್ರಿ ಹೊತ್ತು ಕೋಲಾಟ, ಭಜನೆ, ಗೀಗೀ ಪದಗಳು, ಮತ್ತು ದೊಡ್ಡಾಟಗಳ ಮೂಲಕ ಜನರನ್ನು ಮಂತ್ರಮುಗ್ಧರನ್ನಾಗಿಸುತ್ತಾರೆ. ದುಷ್ಟ ಶಕ್ತಿಯನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸಿದ ಜಗನ್ಮಾತೆಯ ಕಥೆಯನ್ನು ಹಿರಿಯರು ಜನಪದ ದಾಟಿಯಲ್ಲಿ ಹಾಡುತ್ತಿದ್ದರೆ, ಇಡೀ ಕತ್ತಲೆಯ ರಾತ್ರಿಯೇ ಬೆಳಕಿನ ಹಬ್ಬವಾಗಿ ಬದಲಾಗಿಬಿಡುತ್ತದೆ.

ಬನ್ನಿ ಹಂಚುವ ಬಂಗಾರದ ಸಂಪ್ರದಾಯ ದಸರಾ ಹಬ್ಬದ ಅತ್ಯಂತ ಪವಿತ್ರ ಮತ್ತು ಸುಂದರವಾದ ಕ್ಷಣ ಅಂದರೆ ಅದು ಬನ್ನಿ ಹಂಚುವುದು. ವಿಜಯದಶಮಿಯ ಸಾಯಂಕಾಲ ಹಳ್ಳಿಯ ಜನರೆಲ್ಲರೂ ಒಟ್ಟಾಗಿ ಸೇರಿ ಬನ್ನಿ ಮಹಾಕಾಳಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಬನ್ನಿ ಎಲೆಗಳನ್ನು ಕೈಯಲ್ಲಿ ಹಿಡಿದು, ಮುಖದಲ್ಲಿ ಮಂದಹಾಸ ಬೀರುತ್ತಾ, ಪರಿಚಯಸ್ಥರು, ಸ್ನೇಹಿತರು ಹಾಗೂ ಹಿರಿಯರ ಬಳಿ ಹೋಗಿ, ಅವರ ಕಾಲಿಗೆ ನಮಸ್ಕರಿಸಿ ಹೀಗೆ ಹೇಳುತ್ತಾರೆ:
"ಬನ್ನಿ ತಗೋರಿ, ಬಂಗಾರ ಆಗಿರಿ, ಒಳ್ಳೆಯದನ್ನೇ ಮಾತಾಡೋಣ, ಒಳ್ಳೆಯದನ್ನೇ ಯೋಚಿಸೋಣ."
ಈ ಮಾತಿನಲ್ಲಿ ಎಷ್ಟೊಂದು ಮಮತೆ ಅಡಗಿದೆ ಅಲ್ವಾ ಬನ್ನಿ ಎಲೆಯನ್ನು ಬಂಗಾರಕ್ಕೆ ಹೋಲಿಸಿ, ಪರಸ್ಪರರ ನಡುವಿನ ದ್ವೇಷ, ಅಸೂಯೆಗಳನ್ನು ಮರೆತು, ಪ್ರೀತಿ ಮತ್ತು ಸೌಹಾರ್ದತೆಯಿಂದ ಬಾಳೋಣ ಎಂಬ ಸಂದೇಶವನ್ನು ಈ ಹಬ್ಬ ಸಾರುತ್ತದೆ. ಬನ್ನಿ ತಗೊಂಡು ಬಂಗಾರದಂತಾಗುವುದು ಎಂದರೆ ಕೇವಲ ಹಣ-ಆಸ್ತಿ ಗಳಿಸುವುದಲ್ಲ, ಮನಸ್ಸನ್ನು ಬಂಗಾರದಂತೆ ಶುದ್ಧವಾಗಿಟ್ಟುಕೊಳ್ಳುವುದು ಎಂದರ್ಥ.


ಸಕಲ ಜೀವಕೋಟಿಗೂ ನಮನ:
ಆಯುಧ ಪೂಜೆ ನಮ್ಮ ಜನಪದರು ಪ್ರಕೃತಿಯನ್ನು, ತಾವು ನಂಬಿದ ಕಾಯಕವನ್ನು ದೇವರಂತೆ ಕಾಣುವವರು. ರೈತ ತಾನು ಹೊಲ ಉಳುವ ನೇಗಿಲಿಗೆ, ಕತ್ತಿಗೆ, ಬಂಡಿಗೆ ಪೂಜೆ ಮಾಡಿದರೆ; ಬೇರೆ ಬೇರೆ ಕಾಯಕ ಮಾಡುವವರು ತಂತಮ್ಮ ಉಪಕರಣಗಳನ್ನು ತೊಳೆದು, ನೀರು ಹಾಕಿ, ಕುಂಕುಮ-ಚಂದನ ಹಚ್ಚಿ ಪೂಜಿಸುತ್ತಾರೆ. "ಕಾಯಕವೇ ಕೈಲಾಸ" ಎಂಬ ತತ್ವಕ್ಕೆ ಈ ಆಯುಧ ಪೂಜೆ ಕನ್ನಡಿ ಹಿಡಿಯುತ್ತದೆ.
ಮೈಸೂರು ದಸರಾದ ರಾಜವೈಭವ ಹಳ್ಳಿಗಳ ಸಡಗರ ಒಂದು ಕಡೆಯಾದರೆ, ಜಗತ್ಪ್ರಸಿದ್ಧ ಮೈಸೂರು ದಸರಾ ನಮ್ಮ ನಾಡಿನ ರಾಜವೈಭವವನ್ನು ನೆನಪಿಸುತ್ತದೆ. ಚಾಮುಂಡೇಶ್ವರಿ ದೇವಿಯ ಚಿನ್ನದ ಅಂಬಾರಿ ಹೊತ್ತ ಆನೆಗಳ ಗಾಂಭೀರ್ಯದ ನಡಿಗೆ, ಸಾಂಸ್ಕೃತಿಕ ಕಲಾತಂಡಗಳ ಮೆರವಣಿಗೆ, ಮತ್ತು ವಿದ್ಯುತ್ ದೀಪಗಳಿಂದ ಝಗಝಗಿಸುವ ಅರಮನೆಯ ನೋಟ ಇಡೀ ಜಗತ್ತನ್ನೇ ಕರ್ನಾಟಕದತ್ತ ತಿರುಗಿ ನೋಡುವಂತೆ ಮಾಡುತ್ತದೆ.

ಬನ್ನಿ ತಂಗೊಂಡು ಜೊತೆಯಾಗಿ ಸಾಗೋಣ, ಬಂಗಾರದಂತೇ ಎಲ್ಲರು ಹೊಳೆಯೋಣ, ಸಂತೋಷದ ಪಯಣದಲಿ, ಪ್ರೀತಿಯ ಹಣತೆಯನ್ನು ಹಚ್ಚೋಣ.
ನೆನ್ನೆ-ನಾಳೆಯ ಚಿಂತೆಯ ಬಿಟ್ಟು, ಇಂದಿನ ಕ್ಷಣವನು ಸವಿಯೋಣ. ಸೇರಿದ ಒಡನಾಟ ಚಿನ್ನದ ಗಣಿ, ಮಾತುಗಳೆಲ್ಲವೂ ಮುತ್ತಿನ ಮಣಿ,
ಕಷ್ಟದ ಸುಳಿಗೆ ಸಿಲುಕದ ಹಾಗೆ,
ನೆಮ್ಮದಿಯ ಹಾದಿಯ ಸವಿಯೋಣ.
ಬನ್ನಿ ತುಂಬಾ ಬಂಗಾರದ ಆಗೇ ಇರೋಣ,
ಹೀಗೆ ದಸರಾ ಹಬ್ಬವು ನಮ್ಮ ಬದುಕಿನಲ್ಲಿ ಹೊಸ ಭರವಸೆ, ಉತ್ಸಾಹ ಮತ್ತು ವಿಜಯದ ಸಂಕೇತವಾಗಿ ಬರುತ್ತದೆ. ಈ ಹಬ್ಬದ ಶುಭ ಸಂದರ್ಭದಲ್ಲಿ ನಾವೆಲ್ಲರೂ ಮನಸ್ಸಿನ ಕಹಿ ನೆನಪುಗಳನ್ನು ಮರೆತು, ಪ್ರೀತಿಯ ಬನ್ನಿ ಎಲೆಯನ್ನು ಹಂಚುತ್ತಾ ಬಂಗಾರದಂತಹ ಮನಸ್ಸಿನಿಂದ ಬಾಳೋಣ. ಎಲ್ಲರಿಗೂ ನಾಡಹಬ್ಬ ದಸರಾ ಹಾಗೂ ವಿಜಯದಶಮಿಯ ಹಾರ್ದಿಕ ಶುಭಾಶಯಗಳು.

ನಮ್ಮೊಳಗಿನ ಮಹಿಷಾಸುರನನ್ನು ಸಂಹರಿಸೋಣ...

ಕರುನಾಡ ಜನತೆಗೆ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು!

❑ ನೈಜ್ಯ ದೆಸೆ ನ್ಯೂಸ್



ಗಂಗಾಶ್ರೀ ವಿಶ್ವಕರ್ಮ ಮಾನ್ವಿ

ದಸರಾ ನಮ್ಮ ಹಿಂದೂ ಧರ್ಮದ ಪವಿತ್ರ ಹಬ್ಬವಾಗಿದೆ. ಹತ್ತು ದಿನಗಳ ಕಾಲ ನವದುರ್ಗೆಯರನ್ನು ಭಕ್ತಿ ಮತ್ತು ಶ್ರದ್ಧೆಯಿಂದ ಪೂಜಿಸುತ್ತೇವೆ.
ದಸರಾ ಹಬ್ಬದ ಸಂದೇಶವೇ ಅಧರ್ಮದ ವಿರುದ್ಧ ಧರ್ಮದ ವಿಜಯ.

ನವದುರ್ಗೆಯರು
* ಶೈಲಪುತ್ರಿ
* ಬ್ರಹ್ಮಚಾರಿಣಿ
* ಚಂದ್ರಘಂಟಾ
* ಕೂಷ್ಮಾಂಡಾ
* ಸ್ಕಂದಮಾತಾ
* ಕಾತ್ಯಾಯನಿ
* ಕಾಳರಾತ್ರಿ
* ಮಹಾಗೌರಿ
* ಸಿದ್ಧಿದಾತ್ರಿ

ದೇವಿಯ ಪ್ರತಿಯೊಂದು ರೂಪವೂ ನಮಗೆ ಶಕ್ತಿ, ಭಕ್ತಿ, ಧೈರ್ಯ, ಜ್ಞಾನ ಮತ್ತು ಒಳ್ಳೆಯತನದ ಮಹತ್ವವನ್ನು ತಿಳಿಸುತ್ತದೆ.

1. ದಸರಾ ಹಬ್ಬದ ಮಹತ್ವ
ದಸರಾ ಎಂದರೆ ಕೇವಲ ಹಬ್ಬವಲ್ಲ.
ನಮ್ಮ ಜೀವನದಲ್ಲಿ ಎಷ್ಟೇ ಕೆಟ್ಟವರು ಇದ್ದರೂ, ಅವರು ಎಷ್ಟೇ ಬಲಶಾಲಿಗಳಾಗಿದ್ದರೂ, ಕೊನೆಗೆ ಧರ್ಮದ ಮುಂದೆ, ಸತ್ಯದ ಮುಂದೆ ಕೆಟ್ಟತನ ಮತ್ತು ಅಧರ್ಮ ಸೋಲಲೇಬೇಕು ಎಂದು ಸಾರುವ ಪವಿತ್ರ ಹಬ್ಬವಾಗಿದೆ.

2. ಮಹಿಷಾಸುರನ ಕಥೆ
ಮಹಿಷಾಸುರನು ಶಕ್ತಿಶಾಲಿ ಅಸುರನಾಗಿದ್ದನು. ಅವನು ಕಠಿಣ ತಪಸ್ಸು ಮಾಡಿ ಬ್ರಹ್ಮದೇವನನ್ನು ಒಲಿಸಿಕೊಂಡಿದ್ದನು. ಬ್ರಹ್ಮದೇವನು ಅವನ ತಪಸ್ಸಿಗೆ ಮೆಚ್ಚಿ ವರವನ್ನು ಕೇಳುವಂತೆ ಹೇಳಿದನು. ಆಗ ಮಹಿಷಾಸುರನು ತನ್ನನ್ನು ಯಾವ ಅಸುರನಾಗಲಿ, ಪುರುಷನಾಗಲಿ ಸಂಹ-ರಿಸಬಾರದು ಎಂದು ವರವನ್ನು ಕೇಳಿದನು. ಆದರೆ ಸ್ತ್ರೀಶಕ್ತಿಯಿಂದ ತನಗೆ ಮರಣ ಬರಬಹುದು ಎಂಬುದನ್ನು ಅವನು ಊಹಿಸಿರಲಿಲ್ಲ. ಅವನು ಸ್ತ್ರೀಯರನ್ನು ಕೀಳಾಗಿ ಮತ್ತು ಅಸಹಾಯಕರೆಂದು ಭಾವಿಸಿದ್ದನು.
ಈ ದಸರಾ ಹಬ್ಬದ ಮಹತ್ವವೇ ಸ್ತ್ರೀಶಕ್ತಿಯನ್ನು ಪ್ರಪಂಚದಾದ್ಯಂತ ಸಾರುವುದು.

ವರವನ್ನು ಪಡೆದ ನಂತರ ಅವನ ಅಹಂಕಾರ ಹೆಚ್ಚಾಗಿ, ಅಧರ್ಮದ ದಾ-ರಿಯಲ್ಲಿ ನಡೆಯಲು ಪ್ರಾರಂಭಿಸಿದನು. ಆಗ ದೇವತೆಗಳೆಲ್ಲರೂ ವಿಷ್ಣು, ಬ್ರಹ್ಮ ಮತ್ತು ಮಹೇಶ್ವರರ ಬಳಿ ಹೋಗಿ ತಮ್ಮ ಸಮಸ್ಯೆಗಳನ್ನು ತಿಳಿಸಿದರು. ನಂತರ ದೇವತೆಗಳೆಲ್ಲರ ಶಕ್ತಿಯೂ ಒಂದಾಗಿ ಅದ್ಭುತವಾದ ದಿವ್ಯ ತೇಜಸ್ಸು ಮೂಡಿತು. ಆ ದಿವ್ಯಶಕ್ತಿಯು ಆದಿಶಕ್ತಿ ದುರ್ಗಾದೇವಿಯ ರೂಪ ತಾಳಿತು.
ದುರ್ಗಾದೇವಿಯು ಮಹಿಷಾಸುರನೊಂದಿಗೆ ಭೀಕರ ಯುದ್ಧ ಮಾಡಿ, ಅವನನ್ನು ಸಂಹರಿಸಿ ಧರ್ಮದ ಜಯವನ್ನು ತಂದುಕೊಟ್ಟಳು.

ಈ ಕಥೆಯು ನಮಗೆ ತಿಳಿಸುವುದಿಷ್ಟೇ:
ಬ್ರಹ್ಮದೇವನಿಂದ ಪಡೆದ ವರವಿದ್ದರೂ, ಅಧರ್ಮದ ದಾರಿಯಲ್ಲಿ ಸಾಗಿದರೆ ನಮ್ಮ ಅಳಿವು ಶತಸಿದ್ಧ.

3. ಆಯುಧಪೂಜೆಯ ಮಹತ್ವ
ಹಿಂದೂ ಧರ್ಮದಲ್ಲಿ ನಾವು ಕೇವಲ ದೇವರನ್ನು ಮಾತ್ರವಲ್ಲದೆ, ದಿನನಿತ್ಯದ ಕೆಲಸಕಾರ್ಯಗಳಿಗೆ ಬಳಸುವ ಉಪಕರಣಗಳನ್ನು ಹಾಗೂ ನಮಗೆ ಜ್ಞಾನ ನೀಡುವ ಪುಸ್ತಕ, ಪೆನ್ನುಗಳನ್ನೂ ಪೂಜಿಸುತ್ತೇವೆ.

ಬಸವಣ್ಣನವರು ಹೇಳಿದ "ಕಾಯಕವೇ ಕೈಲಾಸ" ಎಂಬ ವಚನದ ಆಶಯದಂತೆ, ನಮ್ಮ ಕೆಲಸವನ್ನು ದೇವರಂತೆ ಕಾಣಬೇಕು. ಕೆಲಸಕ್ಕೆ ಬಳಸುವ ಪ್ರತಿಯೊಂದು ವಸ್ತುವೂ ನಮ್ಮ ಬದುಕಿಗೆ ಅನ್ನ, ನೀರು ಮತ್ತು ಜೀವನೋಪಾಯವನ್ನು ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

4. ಬನ್ನಿ ಮರದ ಮಹತ್ವ
ದಸರಾ ಸಮಯದಲ್ಲಿ ಬೆಳಗಿನ ಜಾವ ಮನೆ ಮತ್ತು ಮನಸ್ಸನ್ನು ಸ್ವಚ್ಛವಾಗಿಟ್ಟುಕೊಂಡು ಬನ್ನಿ ಮರಕ್ಕೆ ಪೂಜೆ ಸಲ್ಲಿಸುತ್ತೇವೆ.
ಈ ಸಂದರ್ಭದಲ್ಲಿ ಪರಿಸರಕ್ಕೆ ಹಾನಿಯಾಗದಂತೆ ಗಿಡಮರಗಳನ್ನು ಬೆಳೆಸುವುದು, ಅವುಗಳಿಗೆ ನೀರುಣಿಸುವುದು ಮತ್ತು ಪ್ರಕೃತಿಯನ್ನು ಗೌರವಿಸುವುದರ ಮಹತ್ವವನ್ನೂ ಅರಿಯೋಣ.
ಪ್ರಕೃತಿಯು ನಮಗೆ ಉಸಿರು ನೀಡುವ ದೇವತೆಯಿದ್ದಂತೆ. ಆದ್ದರಿಂದ ಪ್ರಕೃತಿಯನ್ನು ಪೂಜಿಸುವುದರ ಜೊತೆಗೆ ಅದನ್ನು ಸಂರಕ್ಷಿಸುವುದೂ ನಮ್ಮ ಕರ್ತವ್ಯವಾಗಿದೆ.

5. ಸ್ತ್ರೀಶಕ್ತಿಯ ಸಂಕೇತ
ದಸರಾ ಹಬ್ಬವು ಸ್ತ್ರೀಶಕ್ತಿಯ ಮಹತ್ವವನ್ನು ಸಾರುತ್ತದೆ. ಸ್ತ್ರೀ ಎಂದರೆ ಕೇವಲ ಮನೆಯ ಕೆಲಸಗಳಿಗೆ ಸೀಮಿತವಾದವಳಲ್ಲ. ಆಕೆಯಲ್ಲಿಯೂ ಅದ್ಭುತವಾದ ಶಕ್ತಿ ಅಡಗಿದೆ.
ಸ್ತ್ರೀಯರು ದುರ್ಬಲರಲ್ಲ; ಅವರಲ್ಲಿಯೂ ಅಪಾರವಾದ ಧೈರ್ಯ, ಶಕ್ತಿ ಮತ್ತು ಸಾಮಥ-ರ್ಯವಿದೆ ಎಂಬ ಮಹತ್ವದ ಸಂದೇಶವನ್ನು ಈ ನಾಡಹಬ್ಬ ಸಾರುತ್ತದೆ.

6. ನಿಮ್ಮೊಳಗಿನ ಮಹಿಷಾಸುರನನ್ನು ಕೊಂದುಬಿಡಿ!
ಪ್ರತಿಸಲ ದಸರಾ ಬರುತ್ತದೆ. ಹಬ್ಬವನ್ನು ಆಚರಿಸಿ ಮುಗಿಸುವುದಷ್ಟೇ ನಮ್ಮ ಉದ್ದೇಶವಾಗಬಾರದು. ಒಂದು ಪ್ರತಿಜ್ಞೆಯನ್ನು ಮಾಡೋಣ.
ಅಹಂಕಾರ: ನಾನೇ ಶ್ರೇಷ್ಠ ಎಂಬ ಭಾವನೆಯನ್ನು ತೆಗೆದುಹಾಕಿ, "ನಾವು" ಎಂಬ ಭಾವನೆಯನ್ನು ಬೆಳೆಸಿಕೊಳ್ಳೋಣ. ದುರಾಸೆ: ಎಷ್ಟೇ ದೊರೆತರೂ ಇನ್ನೂ ಬೇಕೆನ್ನುವ ದುರಾಸೆಯೇ ನಮ್ಮ ಅವನತಿಗೆ ಕಾರಣವಾಗಬಹುದು.

ಅನ್ಯಾಯ: ನಮ್ಮ ಶಕ್ತಿಯನ್ನು ಬಳಸಿ ಇತರರನ್ನು ತುಳಿಯಲು ಪ್ರಯತ್ನಿಸುವ ವ್ಯಕ್ತಿ ಎಂದಿಗೂ ನಿಜವಾದ ಸುಖವನ್ನು ಕಾಣಲಾರನು.
ಕೋಪ: ಕೋಪವು ನಮ್ಮ ಯೋಚನಾಶಕ್ತಿ ಮತ್ತು ವಿವೇಚನೆಯನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಅಧರ್ಮ: ಸತ್ಯ ಮತ್ತು ನ್ಯಾಯದ ಮಾರ್ಗವನ್ನು ತೊರೆದು ಬದುಕಬಾರದು.
ಕೊನೆಗೆ ಧರ್ಮಕ್ಕೇ ಜಯವಾಗುತ್ತದೆ.
ಇವೆಲ್ಲವೂ ಮಹಿಷಾಸುರನ ಗುಣಗಳನ್ನು ನೆನಪಿಸುವ ಗುಣಗಳು. ಇವುಗಳನ್ನು ನಾವೂ ನಮ್ಮ ಜೀವನದಿಂದ ದೂರಮಾಡಿಕೊಂಡಾಗ ಮಾತ್ರ ನಮ್ಮ ಬದುಕು ಶಾಂತಿ ಮತ್ತು ನೆಮ್ಮದಿಯಿಂದ ಕೂಡಿರಲು ಸಾಧ್ಯ.

ಈ ವಿಜಯದಶಮಿಯಂದು ನಮ್ಮೊಳಗಿನ ಅಹಂಕಾರ, ದುರಾಸೆ, ಕೋಪ, ಅನ್ಯಾಯ ಮತ್ತು ಅಧರ್ಮವನ್ನು ಸಂಹರಿಸುವ ಪ್ರತಿಜ್ಞೆ ಮಾಡೋಣ.ಕರುನಾಡಿನ ಸಮಸ್ತ ಜನತೆಗೆ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು!

ಹಬ್ಬದ ಬಳಿಕ ಮತ್ತಷ್ಟು ತೀವ್ರಗೊಳ್ಳಲಿದೆ ಜೆಡಿಎಸ್ ಹೋರಾಟ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಸ್ಟಿಂಗ್ ಆಪರೇಷನ್ ಮಾಡಿದ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ನಡೆಸುತ್ತಿರುವ ಹೋರಾಟವನ್ನು ವಿಜಯ ದಶಮಿ ಹಬ್ಬದ ಬಳಿಕ ರಾಜ್ಯಾದ್ಯಂತ ತೀವ್ರಗೊಳಿಸಲು ಜೆಡಿಎಸ್ ಸಜ್ಜಾಗಿದೆ. ಕಳೆದ ಒಂದು ವಾರ ದಿಂದಲೂ ಸ್ಟಿಂಗ್ ಆಪರೇಷನ್ ಮಾಡಿದ ವ್ಯಕ್ತಿ ಹಾಗೂ ಅದರ ಹಿಂದಿರುವ ಸೂತ್ರದಾರಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಸಚಿವ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರು ಆಗ್ರಹಿಸಿ ಹೋರಾಟ ನಡೆಸುತ್ತಿದ್ದಾರೆ.



ಸ್ಟಿಂಗ್ ಆಪರೇಷನ್ ವಿಚಾರದ ಬಗ್ಗೆ ಕುಮಾರಸ್ವಾಮಿ ಅವರು ಆರೋಪ ಮಾಡಿದ ಬೆನ್ನಲ್ಲೆ ಜೆಡಿಎಸ್ ಸಮಾಜಿ-ಕ ಜಾಲತಾಣದ ಸಿಬ್ಬಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಇದರಿಂದ ಆಕ್ರೋಶಗೊಂಡಿದ್ದ ಕುಮಾರಸ್ವಾಮಿ ಅವರು ನಗರ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿದ್ದಲ್ಲದೆ, ಆಯುಕ್ತರ ಕಚೇರಿಯಲ್ಲಿ ಪಕ್ಷದ ಶಾಸಕರು ಹಾಗೂ ಮುಖಂಡರೊಂದಿಗೆ ಕೆಲ ಕಾಲ ಧರಣಿ ನಡೆಸಿ ಎರಡು ದಿನಗಳ ಗಡುವು ನೀಡಿದ್ದರು.

ಗಡುವು ಮುಗಿದರೂ ಸ್ಟಿಂಗ್ ಆಪರೇಷನ್ ಆರೋಪಿಗಳನ್ನು ಬಂಧಿಸಿ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಲು ರಾಜ್ಯ ಸರ್ಕಾರ ಆದೇಶ ಮಾಡಿಲ್ಲ ಎಂದು ಆಕ್ರೋಶಗೊಂಡ ಶನಿವಾರ ಜೆಡಿಎಸ್ ಕೇಂದ್ರ ಕಚೇರಿ ಜೆ.ಪಿ.ಭವನದಿಂದ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿವರೆಗೆ ಪಕ್ಷದ ಶಾಸಕರು ಹಾಗೂ ಮುಖಂಡರೊಂದಿಗೆ ಪಾದಯಾತ್ರೆ ನಡೆಸಿದ್ದರು.

ಎಸ್‌ಐಆರ್ ವಿರುದ್ಧ ಕರ್ನಾಟಕದಲ್ಲೂ ಹೋರಾಟದ ಕಹಳೆ: ಅ.23ರಂದು ರಾಜ್ಯಾದ್ಯಂತ 'ಪ್ರಜಾಪ್ರಭುತ್ವ ಉಳಿಸಿ' ಜನತಾ ರ್‍ಯಾಲಿ

❑ ನೈಜ್ಯ ದೆಸೆ ನ್ಯೂಸ್



ಬೆಂಗಳೂರು,: ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ವಿರೋಧಿಸಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಯ ಕಾವು ಇದೀಗ ಕರ್ನಾಟಕಕ್ಕೂ ವ್ಯಾಪಿಸಿದೆ. ಚುನಾವಣಾ ಆಯೋಗದ ಕ್ರಮವನ್ನು ವಿರೋಧಿಸಿ ರೈತ, ದಲಿತ ಹಾಗೂ ಪ್ರಗತಿಪರ ಸಂಘಟನೆಗಳು ಅಕ್ಟೋಬರ್ 23ರಂದು ರಾಜ್ಯಾದ್ಯಂತ ಬೃಹತ್ ಜನತಾ ರ?ಯಾಲಿ ನಡೆಸಲು ನಿರ್ಧರಿಸಿವೆ.

'ಪ್ರಜಾಪ್ರಭುತ್ವ ಉಳಿವಿಗಾಗಿ ಜನತಾ ರ?ಯಾಲಿ' ಹೆಸರಿನಲ್ಲಿ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ದೆಹಲಿಯ ಜಂತರ್ ಮಂತರ್ ಮಾದರಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲು ಸಂಘಟನೆಗಳು ಸಜ್ಜಾಗಿವೆ. ಬೆಂಗಳೂರಿನಲ್ಲಿ ಸೋಮವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ನಟ ಪ್ರಕಾಶ್ ರಾಜ್ ಹಾಗೂ ರೈತ ಮುಖಂಡರು ಹೋರಾಟದ ರೂಪುರೇಷೆಗಳನ್ನು ಪ್ರಕಟಿಸಿದರು. ದೆಹಲಿಯಲ್ಲಿ ಪ್ರತಿಭಟನೆ ಹತ್ತಿಕ್ಕಲಾಗುತ್ತಿದೆ: ಪ್ರಕಾಶ್ ರಾಜ್ ಆಕ್ರೋಶ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಟ ಪ್ರಕಾಶ್ ರಾಜ್, ಪ್ರಜಾಪ್ರಭುತ್ವದಲ್ಲಿ ಜನ-ರಿಗೆ ಪ್ರತಿಭಟಿಸುವ ಹಕ್ಕಿದೆ. ಆದರೆ ದೆಹಲಿಯಲ್ಲಿ ಹೋರಾಟಗಾರರ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗೆ ನಿರ್ಬಂಧ ಹೇರಿರುವುದನ್ನು ಖಂಡಿಸಿದ ಅವರು, ರಾಷ್ಟ್ರ ರಾಜಧಾನಿಯನ್ನು ಪೊಲೀಸ್ ನಿಯಂತ್ರಣದ ನಗರವನ್ನಾಗಿ ಪರಿವರ್ತಿಸಲಾಗಿದೆ ಎಂದು ಟೀಕಿಸಿದರು. ಪ್ರತಿಭಟನೆಯಲ್ಲಿ ಭಾಗವಹಿಸುವ ಯುವಜನರು ಹಾಗೂ ಮಹಿಳಾ ಪತ್ರಕರ್ತೆಯರ ಮೇಲೆ ಪೊಲೀಸರು ದೌರ್ಜನ್ಯ ನಡೆಸುತ್ತಿದ್ದಾರೆ. ಇದನ್ನು ಪ್ರಶ್ನಿಸಬೇಕಾದ ಸರ್ಕಾರ ಮೌನ ವಹಿಸಿದೆ ಎಂದು ಆರೋಪಿಸಿದರು. 'ರಾಷ್ಟ್ರಧ್ವಜ ಹಿಡಿದು ಮೆರವಣಿಗೆ ನಡೆಸಲೂ ಅವಕಾಶವಿಲ್ಲ' ದೇಶದಲ್ಲಿ ಪ್ರಜಾಪ್ರಭುತ್ವದ ಹಕ್ಕುಗಳನ್ನು ನಿರ್ಬಂಧಿಸಲಾಗುತ್ತಿದೆ ಎಂದು ಆರೋಪಿಸಿದ ಪ್ರಕಾಶ್ ರಾಜ್, ತ್ರಿವರ್ಣ ಧ್ವಜ ಹಿಡಿದು ಶಾಂತಿಯುತ ಮೆರವಣಿಗೆ ನಡೆಸುವುದಕ್ಕೂ ಅವಕಾಶ ನೀಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ದೆಹಲಿಯಲ್ಲಿ ಪ್ರತಿಭಟನೆ ತಡೆಯಲು ಸುಮಾರು 30 ಸಾವಿರ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅವರು ಆರೋಪಿಸಿದರು. ಹೋರಾಟಗಾರರ ವಿರುದ್ಧ ಬಲಪ್ರಯೋಗ ಮಾಡಲಾಗುತ್ತಿದೆ. ಯುವಜನರ ಪ್ರತಿಭಟನೆಗಳನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಜೈಲಿನಲ್ಲಿರುವ ಗೂಂಡಾಗಳನ್ನು ಹೊರಗೆ ಕಳುಹಿಸಿ ಹೋರಾಟಗಾರರ ಮೇಲೆ ಹಲ್ಲೆ ಮಾಡಿಸಲಾಗಿದೆ ಎಂಬ ಗಂಭೀರ ಆರೋಪವನ್ನೂ ಅವರು ಮಾಡಿದರು. 'ರೈತರು ಮತ್ತೆ ಬೀದಿಗಿಳಿಯುತ್ತಾರೆ' ಎಂದು ಎಚ್ಚರಿಕೆ ಹಿಂದಿನ ರೈತ ಹೋರಾಟಗಳನ್ನು ನೆನಪಿಸಿಕೊಂಡ ಪ್ರಕಾಶ್ ರಾಜ್, ರೈತರ ಮೇಲೆ ದಾಳಿ ನಡೆಸಿ ಅಶ್ರುವಾಯು ಪ್ರಯೋಗಿಸಿದರೂ ಅವರ ಹೋರಾಟವನ್ನು ತಡೆಯಲು ಸಾಧ್ಯವಾಗಿರಲಿಲ್ಲ. ರೈತರ ನಿರಂತರ ಹೋರಾಟದ ಪರಿಣಾಮ ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕಾಯಿತು. ಈಗಲೂ ಜನವಿರೋಧಿ ನೀತಿಗಳ ವಿರುದ್ಧ ರೈತರು ಮತ್ತೆ ಬೀದಿಗಿಳಿಯಲಿದ್ದಾರೆ ಎಂದು ಎಚ್ಚರಿಸಿದರು.

ಶಿಕ್ಷಣ ವ್ಯವಸ್ಥೆಯ ಸಮಸ್ಯೆಗಳ ವಿರುದ್ಧ ಯುವಜನರು ಹೋರಾಟ ನಡೆಸುತ್ತಿದ್ದಾರೆ. ಅದೇ ರೀತಿ ಮತದಾರರ ಪಟ್ಟಿ ಪರಿಷ್ಕರಣೆ ವಿರುದ್ಧವೂ ಜನರು ಧ್ವನಿ ಎತ್ತುತ್ತಿದ್ದಾರೆ. ಈ ಹೋರಾಟಕ್ಕೆ ರೈತ ಮತ್ತು ದಲಿತ ಸಂಘಟನೆಗಳು ಬೆಂಬಲ ನೀಡಲಿವೆ ಎಂದು ತಿಳಿಸಿದರು.

'ಎಸ್‌ಐಆರ್ ತಕ್ಷಣ ರದ್ದುಪಡಿಸಿ': ಬಡಗಲಪುರ ನಾಗೇಂದ್ರ ಆಗ್ರಹ ರೈತ ಸಂಘದ ಮುಖಂಡ ಬಡಗಲಪುರ ನಾಗೇಂದ್ರ ಮಾತನಾಡಿ, ಚುನಾವಣಾ ಆಯೋಗದ ಸ್ವಾಯತ್ತತೆ ಹಾಗೂ ನಿಷ್ಪಕ್ಷಪಾತ ಕಾರ್ಯನಿರ್ವಹಣೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ಮುಖ್ಯ ಚುನಾವಣಾ ಆಯುಕ್ತರ ನೇಮಕಾತಿ ಪ್ರಕ್ರಿಯೆ ರಾಜಕೀಯ ಪ್ರಭಾವಕ್ಕೆ ಒಳಗಾಗಿದೆ ಎಂದು ಆರೋಪಿಸಿದ ಅವರು, ನೇಮಕಾತಿ ವ್ಯವಸ್ಥೆ ಪಾರದರ್ಶಕವಾಗಿರಬೇಕು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಕೂಡಲೇ ರದ್ದುಪಡಿಸಬೇಕು ಎಂದು ಆಗ್ರಹಿಸಿದರು. 'ಜಂತರ್ ಮಂತರ್‌ನಲ್ಲಿ ಪ್ರತಿಭಟಿಸಲು ಅವಕಾಶವಿಲ್ಲದಿದ್ದರೆ ಜನ ಎಲ್ಲಿಗೆ ಹೋಗಬೇಕು' ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ಅವಕಾಶ ನೀಡದಿರುವುದನ್ನು ಪ್ರಶ್ನಿಸಿದ ನಾಗೇಂದ್ರ, ಸರ್ಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸಲು ಜನರಿಗೆ ವೇದಿಕೆ ಬೇಕಲ್ಲವೇ ಎಂದು ಕೇಳಿದರು. ಪ್ರತಿಭಟನೆ ನಡೆಸುವ ಹಕ್ಕನ್ನು ನಿರ್ಬಂಧಿಸಿದರೆ ಜನರು ತಮ್ಮ ಅಸಮಾಧಾನವನ್ನು ಎಲ್ಲಿ ವ್ಯಕ್ತಪಡಿಸಬೇಕು ಎಂದು ಪ್ರಶ್ನಿಸಿದರು. ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಹೋರಾಟ ನಡೆಸಲಾಗುವುದು. ಅಗತ್ಯವಿದ್ದರೆ ಹಳ್ಳಿಹಳ್ಳಿಗಳಲ್ಲಿಯೂ ಜಂತರ್ ಮಂತರ್ ಮಾದರಿಯ ಪ್ರತಿಭಟನೆಗಳನ್ನು ಸಂಘಟಿಸಲಾಗುವುದು ಎಂದು ಘೋಷಿಸಿದರು. ರೈತ, ದಲಿತ, ಪ್ರಗತಿಪರ ಸಂಘಟನೆಗಳ ಒಗ್ಗಟ್ಟಿನ ಹೋರಾಟ ಅಕ್ಟೋಬರ್ 23ರಂದು ನಡೆಯಲಿರುವ ಜನತಾ ರ?ಯಾಲಿಯಲ್ಲಿ ರೈತ ಸಂಘಟನೆಗಳು, ದಲಿತ ಸಂಘಟನೆಗಳು ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳು ಒಗ್ಗಟ್ಟಾಗಿ ಭಾಗವಹಿಸಲಿವೆ ಎಂದು ಮುಖಂಡರು ತಿಳಿಸಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆ ರದ್ದತಿ, ಚುನಾವಣಾ ಆಯೋಗದ ನಿಷ್ಪಕ್ಷಪಾತ ಕಾರ್ಯನಿರ್ವಹಣೆ ಹಾಗೂ ಶಾಂತಿಯುತ ಪ್ರತಿಭಟನೆಯ ಹಕ್ಕಿನ ರಕ್ಷಣೆ ಪ್ರಮುಖ ಬೇಡಿಕೆಗಳಾಗಿವೆ. ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಏಕಕಾಲಕ್ಕೆ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸುವ ಮೂಲಕ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ ವಿರುದ್ಧ ಜನಾಭಿಪ್ರಾಯ ರೂಪಿಸಲು ಸಂಘಟನೆಗಳು ಮುಂದಾಗಿವೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101